

ಆಯ್ದ ಕವನಗಳು

ಬಿ. ಎಂ. ಶ್ರೀಕಂಠಯ್ಯ

ಆಯ್ದ ಕವನಗಳು

ಬಿ. ಎಂ. ಶ್ರೀಕಂಠಯ್ಯ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯

AAYDA KAVANAGALU : A Collection of Poems Selected from 'English Geetagalu' and 'Honganasugalu of 'Sree' (B.M. Srikantia), (1884-1946); Edited and Published by B. M. Sri. Smaraka Pratishthana, Bengaluru - 560 019. Demy 1/8, PP. 40 : Price : Rs. 10/-, 2011

ಪ್ರಥಮ ಮುದ್ರಣ : ೧೯೮೪

ದ್ವಿತೀಯ ಮುದ್ರಣ : ೨೦೧೧

ಪುಟಗಳು : xii + ೨೮ =೪೦

ಪ್ರತಿಗಳು : ೩೦೦೦

ಬೆಲೆ : ರೂ. ೧೦/-

ಡಿಟಿಪಿ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ : 26615877

ಮುದ್ರಣ :
ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು – 560 026
✆ : 26757159 / 32715773

ಬಿ.ಎಂ.ಶ್ರೀ. ಪ್ರತಿಷ್ಠಾನದ ಪರಿಚಯ

'ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ'ವನ್ನು ಕಟ್ಟಿ ಬೆಳೆಸಿದವರಲ್ಲಿ ಪ್ರೊ. ಎಂ.ವಿ.ಸೀತಾರಾಮಯ್ಯನರು ಮುಖ್ಯರು, ಅದನ್ನವರು ದಿನಾಂಕ ೬ ಮೇ ೧೯೭೯ರಲ್ಲಿ ಸ್ಥಾಪಿಸಿದರು. ರಾಷ್ಟ್ರಕವಿ ಕುವೆಂಪು ಅವರು ೧೦ ಮಾರ್ಚ್ ೧೯೮೦ರಂದು ಉದ್ಘಾಟಿಸಿದರು. ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ನಗರಪಾಲಿಕೆ, ದಾನಿಗಳ ಮತ್ತು ಸಾರ್ವಜನಿಕರ ಸಹಕಾರ ಸಹಾಯಗಳಿಂದ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ ಮೂರು ಮಹಡಿಗಳ 'ಬಿ.ಎಂ.ಶ್ರೀ. ಕಲಾಭವನ' ನಿರ್ಮಾಣವಾಗಿದೆ. ಇಲ್ಲಿ 'ಆಕರ ಗ್ರಂಥಾಲಯ' ಮತ್ತು 'ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯ'ಗಳನ್ನು ನಿರ್ವಹಿಸಲಾಗುತ್ತಿದೆ. ಪ್ರತಿಷ್ಠಾನದ 'ಪ್ರೊ॥ ಎಂ.ವಿ.ಸೀತಾರಾಮಯ್ಯ ಸ್ನಾತಕೋತ್ತರ ಸಂಶೋಧನ ಕೇಂದ್ರ'ದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಪಿಎಚ್.ಡಿ. ಹಾಗೂ ಎಂ.ಫಿಲ್., ಅಧ್ಯಯನಗಳು ನಡೆಯುತ್ತಿವೆ. ಪ್ರತಿಷ್ಠಾನ ಅಪರೂಪದ ಪ್ರಾಚೀನ ಹಸ್ತಪ್ರತಿಶಾಸ್ತ್ರ–ಹಸ್ತಪ್ರತಿಅಧ್ಯಯನ, ಹಳಗನ್ನಡ ಅಧ್ಯಯನ ತರಗತಿಗಳನ್ನು ಶಿಬಿರಗಳನ್ನು ಹಾಗೂ ದತ್ತಿ ಉಪನ್ಯಾಸ, ವಿಚಾರಗೋಷ್ಠಿಗಳನ್ನು ನಡೆಸುತ್ತಿದೆ. ಪ್ರತಿಷ್ಠಾನ ತ್ರೈಮಾಸಿಕ 'ವಾರ್ತಾಪತ್ರ'ವನ್ನು ಹಾಗೂ ಅರ್ಧವಾರ್ಷಿಕ ವಿದ್ವತ್ ಪತ್ರಿಕೆ 'ಕರ್ನಾಟಕ ಲೋಚನ'ವನ್ನೂ ವಿದ್ವತ್‌ಪೂರ್ಣ ಗ್ರಂಥಗಳನ್ನೂ ಪ್ರಕಟಿಸುತ್ತಿದೆ. ನಿರಂತರವಾಗಿ ಸಂಶೋಧನಾತ್ಮಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವ ಪ್ರತಿಷ್ಠಾನ ೨೦೦೪ರಲ್ಲಿ ರಜತಮಹೋತ್ಸವವನ್ನು ಆಚರಿಸಿತು. ಮಂಡ್ಯ ಜಿಲ್ಲೆಯ ಬಿ.ಎಂ.ಶ್ರೀ.ಯವರ ಊರಾದ ಬೆಳ್ಳೂರಿನಲ್ಲೂ ಪ್ರತಿಷ್ಠಾನದ ಶಾಖೆಯಿದ್ದು ಅಲ್ಲಿ ನಿರ್ಮಿಸಿರುವ 'ಬಿ.ಎಂ.ಶ್ರೀ. ಶತಮಾನ ಭವನ'ದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿರುತ್ತವೆ. ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದ 'ಎಂ.ವಿ.ಸೀ. ಸಭಾಂಗಣ'ದಲ್ಲಿ ಪ್ರತಿಷ್ಠಾನದ ಮತ್ತು ಸಂಘಸಂಸ್ಥೆಗಳ ಸಾಹಿತ್ಯ –ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಉನ್ನತಮಟ್ಟದ ಸಂಶೋಧನ ಸಂಸ್ಥೆಯಾಗಿ ಪ್ರತಿಷ್ಠಾನ ಮಾನ್ಯವಾಗಿದೆ.

ಮುಂಮಾತು

ಅಖಂಡ ಕನ್ನಡ ನಾಡು ನುಡಿ ಸಂಸ್ಕೃತಿಗಳ ಸಂದರ್ಭದಲ್ಲಿ ಕನ್ನಡ ನವೋದಯ ಪ್ರವರ್ತಕ ಆಚಾರ್ಯ ಬಿ.ಎಂ.ಶ್ರೀಕಂಠಯ್ಯ ಅವರು ಮತ್ತೆ ಮತ್ತೆ ನೆನಪಾಗುವ ಪ್ರಾತಃ ಸ್ಮರಣೀಯರಾಗಿದ್ದಾರೆ. ಅವರು ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಶಿಷ್ಯಕೋಟಿಗೆ, ಕನ್ನಡ ಕಾಯಕದಲ್ಲಿ ತೊಡಗುವ ಕನ್ನಡ ಭಂಟರಿಗೆ, ಪರಂಪರೆಯ ಹಿನ್ನೆಲೆಯಲ್ಲಿ ಶ್ರಮಿಸುವ ಸಂಸ್ಕೃತಿ ಸಂವರ್ಧಕರಿಗೆ ನೀಡಿರುವ ಸದಾಶಯದ ಸ್ಫೂರ್ತಿ ಅಷ್ಟಿಷ್ಟಲ್ಲ. ಶ್ರೀಯುತರು 'ಶ್ರೀ', 'ಬಿ.ಎಂ.ಶ್ರೀ'. ಎಂಬ ಕಾವ್ಯನಾಮಗಳಲ್ಲಿ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯ ಸೃಷ್ಟಿಸಿ ಕನ್ನಡ ಸಾರಸ್ವತ ಕ್ಷೇತ್ರದಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿದ್ದಾರೆ. ಅವರ ವಾಕ್ಪಟುತ್ವ ಸಮಕಾಲೀನರಲ್ಲಿ ಬೆರಗು ಹುಟ್ಟಿಸಿದೆ, ಚಿಂತನಶೀಲತೆ ಬೆಳಕುನೀಡಿದೆ. ಅವರ ಹಾಗೆ ಕನ್ನಡ ನಾಡನ್ನು, ಕನ್ನಡ ನಾಡವರನ್ನು, ಕನ್ನಡ ನುಡಿಯನ್ನು, ಕನ್ನಡ ಸಾಹಿತ್ಯವನ್ನು ಮನಸಾರೆ ಮೈದುಂಬಿಕೊಂಡು ಆಡಿ, ಹಾಡಿ ತಣಿದವರು ವಿರಳ.

ಬಿ.ಎಂ.ಶ್ರೀಕಂಠಯ್ಯ ಅವರ ಮಾತು ಮಂತ್ರ ಬರವಣಿಗೆ ಪ್ರತಿಭಾಸೂತ್ರ. ಅನುವಾದವಾಗಲಿ, ಸ್ವರಚನೆಯಾಗಲಿ ಆಯ್ಕೆಯಲ್ಲಿ, ಅಭಿರುಚಿಯಲ್ಲಿ ಸಮಚಿತ್ತದ ಹದ; ಸದಾಶಯದ ಮುದ. ಅಪ್ಯಾಯಮಾನಕ್ಕೆ ಆದ್ಯತೆ; ಆರ್ದ್ರತೆಗೆ ಮನ್ನಣೆ. ಬಿ.ಎಂ.ಶ್ರೀ. ಅವರು ಎರಡು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಒಂದು : ಇಂಗ್ಲೀಷ್ ಗೀತಗಳು. ಇನ್ನೊಂದು : ಹೊಂಗನಸುಗಳು. ಅವುಗಳ ಹೆಚ್ಚುಗಾರಿಕೆಯನ್ನು ಕನ್ನಡ ಕಾವ್ಯರಸಿಕರು ಕೊಂಡಾಡಿದ್ದಾರೆ. 'ಇಂಗ್ಲಿಷ್ ಗೀತಗಳು' ಕನ್ನಡ ನವೋದಯ ಕಾವ್ಯದ ಮೇರುಕೃತಿ. ಆಧುನಿಕ ಕನ್ನಡ ಕಾವ್ಯಪರಂಪರೆಗೆ ಹೊಸಬೆಳೆ, ಹೊಸಕಳೆ, ಹೊಸಸೆಲೆ, ಹೊಸನೆಲೆ ತಂದುಕೊಟ್ಟ ಕೃತಿ. ಅದರ ಅಯಸ್ಕಾಂತ ಸುಳಿಗೆ ಸಿಲುಕದವರಿಲ್ಲ. 'ಹೊಂಗನಸುಗಳು' ಕವನ ಸಂಗ್ರಹದಲ್ಲಿ 'ಶ್ರೀ' ಅವರ ವೈವಿಧ್ಯಮಯ ಕಾವ್ಯಪ್ರಯೋಗಕ್ಕೆ ನಾಡುನುಡಿ ಭಕ್ತಿಯ ಅಭಿವ್ಯಕ್ತಿಗೆ, ರಾಜಭಕ್ತಿ, ದೇಶಭಕ್ತಿ, ಸಾರ್ವಭೌಮತ್ವದ ಗೌರವಕ್ಕೆ ಸಾಕ್ಷಿಯಾಗುವ ಕವಿತೆಗಳಿವೆ. ಈ ಎರಡೂ ಗ್ರಂಥಗಳಿಂದ ಆರಿಸಿದ ಕವಿತೆಗಳ ಕಿರು ಸಂಕಲನ 'ಆಯ್ದ ಕವನಗಳು'.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರೂ ವಿದ್ವಾಂಸರೂ ಆದ ಪ್ರಾಧ್ಯಾಪಕ ಎಂ.ವಿ.ಸೀತಾರಾಮಯ್ಯ ಅವರು 'ಶ್ರೀ' ಅವರ ಕಾವ್ಯಸುಧೆಯನ್ನು ಅಲ್ಪ ಪ್ರಮಾಣದಲ್ಲಿ ಕನ್ನಡಿಗರಿಗೆ ಮುಟ್ಟಿಸುವ ಸದುದ್ದೇಶದಿಂದ ೧೯೮೮ರಲ್ಲಿ 'ಆಯ್ದ ಕವನಗಳು' ಗ್ರಂಥವನ್ನು ಸಿದ್ಧಪಡಿಸಿ ಪ್ರಕಟಿಸಿದ್ದರು. ಅದರ ಮರುಮುದ್ರಣ ಪ್ರಸ್ತುತ ಪುಸ್ತಕ. ಕನ್ನಡದ ಕಣ್ವ ಬಿ.ಎಂ.ಶ್ರೀಕಂಠಯ್ಯ ಅವರ ಕಾವ್ಯಕೌಶಲವನ್ನು ಅರಿಯುವುದಕ್ಕೆ, ಅವರ ಇತರ ಗ್ರಂಥಗಳನ್ನು ಅಧ್ಯಯನ ಮಾಡುವುದಕ್ಕೆ ಈ ಗ್ರಂಥ ನೆರವಾಗುತ್ತದೆ. ಪ್ರಸ್ತುತ ಹೊತ್ತಗೆ ಬಿ.ಎಂ.ಶ್ರೀ.

ಜನ್ಮದಿನದ ಸವಿನೆನಪಿನ ಕುಸುಮವಾಗಿ ಪ್ರಕಟವಾಗುತ್ತಿದೆ. ಕರ್ನಾಟಕದ ಕಿರಿಯರೂ ಹಿರಿಯರೂ ಈ ಸರಳ ಸುಂದರ ಕವಿತೆಗಳನ್ನು ಓದಿ ಹಾಡಿ ಮನನವಾಡಿ ಸಂತೋಷಪಡಬಹುದು.

ಪ್ರಾಚೀನವಾದ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭ್ಯವಾಗಿದೆ. ಇದರ ಹಿನ್ನೆಲೆಯಲ್ಲಿ ಕಾರ್ಯೋನ್ಮುಖರಾಗುವುದು ಅಗತ್ಯವಾಗಿದೆ. ಇದಕ್ಕಾಗಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಲವು ಅರ್ಥಪೂರ್ಣ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಉತ್ಸುಕವಾಗಿದೆ. ಕನ್ನಡ ಶಾಸ್ತ್ರೀಯ ಭಾಷಾ ಅರಿವು ಮನನ ಪ್ರಸಾರ ಸಮಾವೇಶ; ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನ ತರಬೇತಿ ವಿನ್ಯಾಸ; ಪ್ರಾಚೀನ ಕನ್ನಡ ಹಸ್ತಪ್ರತಿ ಸಂಗ್ರಹ ಸಂರಕ್ಷಣೆ ಸಂಪಾದನೆ ಪ್ರಕಟನೆ ಸಂವಾದ ಸಮಾವೇಶ; ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ ವಿಧಿವಿಧಾನ; ಕನ್ನಡ ಜಾಗೃತಿ ರೂಪು ರೇಷೆ ನಿರ್ಮಾಣ; ಕನ್ನಡತನಕ್ಕೆ ಇಂಬಾಗುವ ಅಧ್ಯಯನ ಸಂಶೋಧನೆ; ಜಾಗತೀಕರಣದ ಆಕ್ರಮಣದಿಂದ ಉಂಟಾಗುವ ಸಮಕಾಲೀನ ಕನ್ನಡ ಸಮಸ್ಯೆಗಳ ವಿಶ್ಲೇಷಣೆ ಮೊದಲಾದ ಅನನ್ಯ ಅಂಶಗಳು 'ಶ್ರೀ ಉತ್ಸವ'ದ ಹೆಸರಿನಲ್ಲಿ ಅಡಕವಾಗುತ್ತವೆ. ಇವುಗಳ ಕಾರ್ಯಸಾಧನೆಗೆ ಸಮಸ್ತ ಕನ್ನಡಿಗರ ಸಲಹೆ ಸಹಕಾರ ಸಕ್ರಿಯ ಪಾಲ್ಗೊಳ್ಳುವಿಕೆ ಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ. ಡಿ. ಲಿಂಗಯ್ಯ
ಅಧ್ಯಕ್ಷರು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು
೦೩-೦೧-೨೦೧೧

ಬಿ.ಎಂ.ಶ್ರೀ ಮತ್ತು ಕನ್ನಡ ಜಾಗೃತಿ

ಎರಡು ಸಾವಿರ ವರ್ಷಕ್ಕೂ ಅಧಿಕ ಪ್ರಾಚೀನ ಇತಿಹಾಸ, ಭವ್ಯ ಸಂಸ್ಕೃತಿ, ಭಾಷೆ, ಸಾಹಿತ್ಯವನ್ನು ಹೊಂದಿರುವ ಶ್ರೀಮಂತ ಭಾಷೆ ಕನ್ನಡ. ರಾಮಾಯಣ, ಮಹಾಭಾರತ ಕಾಲದಿಂದಲೂ ಕರ್ನಾಟಕದ ಜನಪದ, ಕನ್ನಡ ನಾಡು ಅಸ್ತಿತ್ವದಲ್ಲಿದೆ. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳು' ಕನ್ನಡಿಗರೆಂದು ಕ್ರಿ.ಶ. ೮೫೦ರ ಕವಿರಾಜಮಾರ್ಗ ಹೇಳಿದರೆ, 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಾನ್ ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತರೆಂದು ಕನ್ನಡಿಗರನ್ನು ೬ನೇ ಶತಮಾನದ ಬಾದಾಮಿ ಶಾಸನ ಹೇಳುತ್ತದೆ. ಕ್ರಿಸ್ತಪೂರ್ವ ಕಾಲದಲ್ಲೇ ಕನ್ನಡ ನಾಡು, ಕನ್ನಡ ಜನಪದ ಭವ್ಯಸಂಸ್ಕೃತಿಯ ನಾಗರಿಕ ಸಮಾಜವನ್ನು ಕಟ್ಟಿಕೊಂಡಿದ್ದು ಸುಸಂಸ್ಕೃತರಾಗಿದ್ದರು. 'ಕಾವೇರಿಯಿಂದ ಗೋದಾವರಿ ವರಮಿರ್ಪ ನಾಡದಾ'ಗಿ ವಿಶಾಲ ಕರ್ನಾಟಕವಾಗಿದ್ದ ಪ್ರಾಚೀನ ಕರ್ಣಾಟಕ ಇಂದು ಹರಿದುಹಂಚಿಹೋಗಿ ಪುಟ್ಟ ಕರ್ನಾಟಕವಾಗಿ ಉಳಿದಿದೆ. ಹಿಂದೆ ಕನ್ನಡದ ರಾಜರು 'ಇಡೀ ದಕ್ಷಿಣ ಕರ್ನಾಟಕದ ಆಂಧ್ರ ಮಹಾರಾಷ್ಟ್ರ ತಮಿಳುನಾಡು ಕೇರಳ ಗೋವಗಳನ್ನು ಆಳಿದ್ದುದಕ್ಕೆ ಅಲ್ಲೆಲ್ಲ ಸಾವಿರಾರು ಕನ್ನಡ ಶಾಸನಗಳು ಮತ್ತು ಅವರು ಕಟ್ಟಿಸಿರುವ ದೇವಾಲಯಗಳು ಸಾಕ್ಷಿಯಾಗಿವೆ. ಗುಜರಾತ್‌ನ ಅಜಂತ ಎಲ್ಲೋರಗಳೂ ಕರ್ನಾಟಕದ ದೊರೆಗಳ ಸಾಧನೆಯಾಗಿವೆ. ನೆರೆಯ ನೇಪಾಳದ ರಾಜವಂಶ ಮೂಲದಲ್ಲಿ ಕನ್ನಡ ರಾಜವಂಶವೇ ಆಗಿದೆ.

ಒಂದು ಸಾವಿರ ವರ್ಷಕ್ಕೂ ಅಧಿಕವಾದ ಭವ್ಯ ಸಾಹಿತ್ಯ ಪರಂಪರೆ ನಮ್ಮದಾಗಿದೆ. ಪಂಪನಿಂದ ಮುದ್ದಣನವರೆಗೆ ವೈವಿಧ್ಯಮಯ ಸಾಹಿತ್ಯಗಳು ರಚನೆಯಾಗಿವೆ. 'ಮಾನವ ಜಾತಿ ತಾನೊಂದೆ ವಲಂ' ಎಂಬ ವಿಶ್ವಮಾನವ ಪ್ರಜ್ಞೆಯನ್ನು ೧೦ನೇ ಶತಮಾನದಲ್ಲೇ ತೋರಿದ 'ಪಂಪ'ನಂತಹ ನೂರಾರು ಜನ ವಿಶ್ವಕವಿಗಳ ಮಾನವತಾವಾದಿಗಳ ಬೀಡು ಕರ್ನಾಟಕ. ವಚನ ಚಳವಳಿ, ಕೀರ್ತನ ಸಾಹಿತ್ಯ ಚಳವಳಿಗಳು ಜಗತ್ತಿನ ಬೇರಾವ ಭಾಗದಲ್ಲೂ ಆ ಕಾಲದಲ್ಲಿ ನಡೆದಿರಲಿಲ್ಲ. ಇವು ಜಾಗತಿಕ ಸಾಹಿತ್ಯಕ್ಕೆ ಕರ್ನಾಟಕದ ಕೊಡುಗೆ. ಜಗತ್ತು ಇನ್ನೂ ನಾಗರೀಕತೆಯನ್ನು ಕಾಣದಿದ್ದ ಕಾಲದಲ್ಲಿ ಕರ್ನಾಟಕದಲ್ಲಿ ಈ ಸಾಮಾಜಿಕ ಆಂದೋಲನ ನಡೆದು ಜನರನ್ನು ಸನ್ಮಾರ್ಗದತ್ತ ಕೊಂಡೊಯ್ದು, ಮಾನವ ಪ್ರೇಮವನ್ನು ಮೆರೆದ ಮಾನವೀಯತೆಯ ಮೇರುನಾಡಾಗಿ ಕರ್ನಾಟಕ ಕಾಣಿಸಿಕೊಂಡಿದೆ. ಸ್ತ್ರೀ–ಪುರುಷ, ಮೇಲು–ಕೀಳು, ಬ್ರಾಹ್ಮಣ–ದಲಿತರನ್ನೆಲ್ಲ ಒಟ್ಟಿಗೆ ತಂದು ಸಮಾನತಾ ಸಮಾಜವನ್ನು ೧೨ನೇ ಶತಮಾನದಲ್ಲೇ ರೂಪಿಸಿ ಮಾದರಿಯಾಗಿದೆ.

ಕನ್ನಡದ ಶ್ರೇಷ್ಠಸಾಹಿತ್ಯ ಪರಂಪರೆ ಇಂದಿಗೂ ಮುಂದುವರಿದಿದೆ. ಭಾರತದಲ್ಲೇ ಸರ್ವ ಪ್ರಥಮ ಜ್ಞಾನಪೀಠ ಸಾಧನೆಯ ಶ್ರೇಷ್ಠ ಗುಣಮಟ್ಟದ ನಾಡಾಗಿ ಕರ್ನಾಟಕದ ಸಾಹಿತ್ಯ ನಿಂತಿದೆ. ಯಾವ ರಾಜ್ಯಕ್ಕೂ ಇಲ್ಲದ ಏಳು ಜ್ಞಾನಪೀಠ ಪ್ರಶಸ್ತಿಗಳನ್ನು ನಾವು ಪಡೆದಿದ್ದೇವೆ. ರಾಷ್ಟ್ರಕವಿ ಕುವೆಂಪು ಅವರಂತಹ ವಿಶ್ವಮಾನವ ಸಾಹಿತಿಗಳು ನಮ್ಮ ನಾಡಿನವರಾಗಿದ್ದಾರೆ.

ಇಷ್ಟೆಲ್ಲ ಭವ್ಯ ಸಾಹಿತ್ಯ – ಸಂಸ್ಕೃತಿಯ ಇತಿಹಾಸ ನಮ್ಮಲ್ಲಿದ್ದರೂ ನಾವು ನಮ್ಮ ನಾಡು–ನುಡಿಯ ಬಗ್ಗೆ ಅಭಿಮಾನಶೂನ್ಯರಾಗಿದ್ದೇವೆ. ನಮ್ಮ ಭಾಷೆ–ಸಾಹಿತ್ಯದ ಬಗ್ಗೆ ಅಜ್ಞಾನಿಗಳಾಗಿದ್ದೇವೆ. ಅನ್ಯಭಾಷೆ – ಸಾಹಿತ್ಯವನ್ನೇ ಓದುತ್ತ; ಶಿಕ್ಷಣ – ವ್ಯವಹಾರ – ಆಡಳಿತಗಳಲ್ಲೆಲ್ಲ ಅದನ್ನೇ ತುಂಬಿಕೊಂಡು ಕನ್ನಡವನ್ನು ನಿರ್ಲಕ್ಷಿಸಿದ್ದೇವೆ. ಇದು ಅಕ್ಷಮ್ಯ ಅಪರಾಧ. ಕನ್ನಡಕ್ಕೆ ಕನ್ನಡಿಗರೇ ಶತ್ರುಗಳಾಗಿದ್ದಾರೆ. ಅವರು ಎಲ್ಲೇ ಇದ್ದರೂ ಏನೇ ಮಾಡುತ್ತಿದ್ದರೂ ಏನೇ ಆಗಿದ್ದರೂ ಸದಾ ಕನ್ನಡಿಗರಾಗಿರಬೇಕಾದ ಅರಿವನ್ನು ಮೂಡಿಸಿ ಕೊಳ್ಳಬೇಕು. ಕುವೆಂಪು ಅವರ 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡಿಗವಾಗಿರು' ಎಂಬ ಗೀತೆಯನ್ನು ನಾವೆಲ್ಲ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ವಿದೇಶ–ಹೊರರಾಜ್ಯಗಳಿಗೆ ಹೋದವರು ಅಲ್ಲೇ ನೆಲೆಸಿ ತಾವು ಕನ್ನಡ ಮರೆತು ಮಕ್ಕಳಿಗೂ ಕಲಿಸದೆ ಆ ಸಂಸ್ಕೃತಿಯಲ್ಲೇ ಬೆರೆತುಹೋಗುತ್ತಾರೆ. ಆದರೆ ಹಾಗಾಗಬಾರದು. ತಮ್ಮ ಮಕ್ಕಳಿಗೂ ಅಲ್ಲಿಯವರಿಗೂ ಕನ್ನಡವನ್ನು ಕಲಿಸುವ, ಕನ್ನಡ ಸಂಸ್ಕೃತಿಯನ್ನು ಪರಿಚಯಿಸುವ ರಾಯಭಾರಿಗಳಾಗಬೇಕು. ಕರ್ನಾಟಕದಲ್ಲಿ ಪ್ರತಿಯೊಬ್ಬರೂ ಕನ್ನಡವನ್ನು ಕಲಿಯಬೇಕು. ಮನಃಪೂರ್ವಕವಾಗಿ ಕನ್ನಡಿಗರಾಗಿರಬೇಕು. ತಮ್ಮ ಎಲ್ಲ ಅಗತ್ಯಗಳಿಗೆ ಕನ್ನಡವನ್ನು ಬಳಸಬೇಕು. ಕನ್ನಡದಲ್ಲೇ ಮಾತಾಡುವುದು, ಸಹಿಮಾಡುವುದು, ಆಹ್ವಾನ–ಪತ್ರಗಳನ್ನು ಕನ್ನಡದಲ್ಲೇ ಮುದ್ರಿಸುವುದು ಎಲ್ಲವನ್ನೂ ಕನ್ನಡದಲ್ಲೇ ಮಾಡಬೇಕು. ಇಂಗ್ಲಿಷ್ ಮಾಧ್ಯಮ ಓದಿದ ಮಾತ್ರಕ್ಕೆ ಇಂಗ್ಲಿಷರಾಗಿ ಪರಿವರ್ತಿತರಾಗಬಾರದು. ಇಂಗ್ಲಿಷಿನಲ್ಲಿ ಮಾತಾಡಿದರೇ ಗೌರವ ಎಂಬ ಭ್ರಮೆಗೆ ಒಳಗಾಗಿ ಇಂದು ಕನ್ನಡಿಗರೂ ಕನ್ನಡೇತರರಾಗಿ ನಡೆದುಕೊಳ್ಳುವ ಮೂಲಕ ಕರ್ನಾಟಕದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಆಳುವ ಜನರೂ ಓಟಿನ ರಾಜಕೀಯಕ್ಕಾಗಿ ಕನ್ನಡಿಗರು ಮತ್ತು ಇತರರಲ್ಲಿ ಭೇದಭಾವಬಿತ್ತಿ ಘರ್ಷಣೆಯುಂಟು ಮಾಡುತ್ತಿದ್ದಾರೆ. ಮೊದಲು ಈ ಭಿನ್ನತೆತೊರೆದು ಕರ್ನಾಟಕದಲ್ಲಿರುವವರೆಲ್ಲ ಒಂದೇ, ಕನ್ನಡಿಗರೇ ಎಂಬ ಭಾವವಿರಬೇಕು. ಅನ್ಯಭಾಷಿಗರು ಮನೆಮಾತು ಯಾವುದಿದ್ದರೂ ಹೊರಗೆ ಕನ್ನಡದಲ್ಲಿಯೇ ವ್ಯವಹರಿಸಿ ಕನ್ನಡಿಗರನ್ನು ಪ್ರೀತಿಸಿ ಕನ್ನಡಿಗರಾಗಬೇಕು. ಕನ್ನಡಿಗರು ಅನ್ಯಭಾಷಿಗರಿಗೆ ಕನ್ನಡ ಕಲಿಸಿ ಕನ್ನಡದಲ್ಲಿ ಮಾತಾಡಿಸಿ ಕನ್ನಡ ವಾತವರಣ ರೂಪಿಸಬೇಕು. ಕನ್ನಡದ ಶಾಸ್ತ್ರೀಯ ಭಾಷೆಯ ಕೀರ್ತಿ ಉಳಿಸಿಕೊಳ್ಳಬೇಕಾದರೆ ಕನ್ನಡ ಜನಮನದಲ್ಲಿ ಉಳಿಯಬೇಕು.

ಈ ಆಶಯಗಳನ್ನಿಟ್ಟುಕೊಂಡು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ಆಧುನಿಕ ಕನ್ನಡದ ಸಂದರ್ಭದಲ್ಲಿ ಕನ್ನಡ ಜಾಗೃತಿಯ ಹೋರಾಟವನ್ನು ರೂಪಿಸಿದರು. ಹೊಸ ಸಾಹಿತ್ಯ ರಚಿಸಿದರು. ಅದರ ಫಲವೇ 'ಇಂಗ್ಲೀಷ್ ಗೀತಗಳು'. ಇದು ಕನ್ನಡದ ಹೊಸ ಕಾವ್ಯಕ್ಕೆ ರಾಜಮಾರ್ಗವಾಯಿತು. ಇಂದಿಗೂ ಬರೆಯುವ ಕವಿತೆಗಳಿಗೆ ಇದೇ ಆದರ್ಶ. ಶ್ರೀಯುತರು ತೋರಿಸಿದ ಹೊಸಗನ್ನಡ ಕವಿತೆಯ ಕೆಲವು ಮಾದರಿ ಇಲ್ಲಿವೆ. ಇವುಗಳಿಂದ ನಮ್ಮ ಕನ್ನಡಾಭಿಮಾನವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈ ವರ್ಷದಿಂದ ಶ್ರೀ ಜನ್ಮದಿನದಂದು ಬಿ.ಎಂ.ಶ್ರೀ. ಗೀತೆಗಳ ಗಾಯನ ಸ್ಪರ್ಧೆಯನ್ನು ನಡೆಸುತ್ತಿರುವುದರಿಂದ ಅದರ ಅನುಕೂಲಕ್ಕಾಗಿ ಈ ಸಂಕಲನವನ್ನು ಪುನರ್ಮುದ್ರಿಸಲಾಗಿದೆ.

ಡಾ. ನಾ. ಗೀತಾಚಾರ್ಯ
ಸಂಗ್ರಾಹಕ

ಮುನ್ನುಡಿ

(ಪ್ರಥಮ ಮುದ್ರಣಕ್ಕೆ ಬರೆದಿದ್ದು)

ಬ್ರಿಟಿಷರ ಆಳಿಕೆಯ ಸತ್ಫಲಗಳಲ್ಲಿ ಇಂಗ್ಲಿಷ್ ಭಾಷೆ ಸಾಹಿತ್ಯಗಳ ವಿದ್ಯಾಭ್ಯಾಸವೂ ಒಂದು. ಇದರ ಪರಿಣಾಮವಾಗಿ ಹತ್ತೊಂಬತ್ತನೆಯ ಶತಮಾನದ ಉತ್ತರ ಭಾಗದಲ್ಲಿ ಭಾರತದಲ್ಲೆಲ್ಲಾ ದೇಶಾಭಿಮಾನ ಜಾಗೃತವಾಯಿತು. ಸ್ವದೇಶಾಭಿಮಾನವು ಸ್ವಭಾಷಾಭಿಮಾನಕ್ಕೆ ದಾರಿಮಾಡಿಕೊಟ್ಟಿತು. ಪ್ರತಿಯೊಂದು ಪ್ರಾಂತದಲ್ಲಿಯೂ ಭಾಷಾಭಿಮಾನಿಗಳು ತಂತಮ್ಮ ಸಾಹಿತ್ಯದ ಕುಂದುಕೊರತೆಗಳ ಕಡೆಗೂ ಅದರ ಏಳಿಗೆಯ ಕಡೆಗೂ ದೃಷ್ಟಿಹರಿಸಿದರು; ಈ ಹೊಸ ಎಚ್ಚರಿಕೆ ಮೂಡಿದ್ದು ಇಂಗ್ಲಿಷ್ ಸಾಹಿತ್ಯ ಗಾಢವಾದ ಪರಿಚಯ ಲಾಭವನ್ನು ಪಡೆದ ಸಾಹಿತ್ಯರಸಿಕರಲ್ಲಿ. ಸಾಹಿತ್ಯ ರೀತಿ ನೀತಿಗಳ ಬಗೆಗೆ ಒಂದು ಹೊಸ ದೃಷ್ಟಿಯನ್ನೆ ಪಡೆದುಕೊಂಡು ಕಾವ್ಯರಸಜ್ಞರು ಜಡಗಟ್ಟಿದ ಸಂಪ್ರದಾಯ ಮಾರ್ಗವನ್ನು ತೊರೆದು ಹೊಸ ಮಾರ್ಗದಲ್ಲಿ ಕಾವ್ಯರಚನೆ ಮಾಡಬೇಕು, ಮಾಡಿಸಬೇಕು, ಎಂಬ ಉತ್ಕಟವಾದ ಪ್ರೇರಣೆ ಹೊಂದಿದರು. ಹೆಚ್ಚು ಕಡಮೆ ಏಕಕಾಲದಲ್ಲಿ ಭಾರತದ ಸಾಹಿತ್ಯಲೋಕದಲ್ಲಿ ಒಂದು ನವೋದಯ ಆಯಿತು.

ಕನ್ನಡ ನಾಡು ಹಿಂದೆಬೀಳಲಿಲ್ಲ. ನವೋದಯದ ಹೊಂಗಿರಣಗಳು ಇಲ್ಲಿಯೂ ಬಣ್ಣಬಣ್ಣವಾಗಿ ಹೊರ ಹರಿದವು. ಕತೆ, ಕಾದಂಬರಿ, ಪದ್ಯ, ನಾಟಕ ಮುಂತಾಗಿ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಹೊಸ ದೃಷ್ಟಿಯ ಹೊಸ ಸೃಷ್ಟಿ, ಹೊಸ ಬೆಳಕು, ಮೊಳೆತು ಬೆಳೆಯಲಾರಂಭವಾಯಿತು. ಪದ್ಯಕಾವ್ಯಸಂಬಂಧವಾಗಿ, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಪಂಜೆ ಮಂಗೇಶರಾವ್, ಗೋವಿಂದ ಪೈ, ಹಟ್ಟಿಯಂಗಡಿ ನಾರಾಯಣರಾವ್, ಶಾಂತಕವಿ, ಡಿ.ವಿ.ಜಿ., ಎಸ್.ಜಿ. ನರಸಿಂಹಾಚಾರ್, ಮುಂತಾದವರು ಹೊಸ ಕಾವ್ಯದ ಸಾಧ್ಯತೆಗಳನ್ನು ಗುರುತಿಸಿದ ಮೊದಲಿಗರಲ್ಲಿ ಅಗ್ರಗಣ್ಯರು. 'ಶ್ರೀ'ಯವರೂ ಈ ಗುಂಪಿಗೇ ಸೇರತಕ್ಕವರು. ಆದರೆ ವಸ್ತುವೈವಿಧ್ಯ, ಬಗೆಬಗೆಯ ಛಂದಸ್ಸಿನ ಪ್ರಯೋಗ, ಸಂಖ್ಯಾದೃಷ್ಟಿಯಿಂದ ಕವಿತೆಯ ಪ್ರಮಾಣ, ಮಾರ್ಗದರ್ಶನಕ್ಕಾಗಿ ಕಾದಿದ್ದ ಶಿಷ್ಯಕೋಟಿಯನ್ನು ಪಡೆದ ಆಚಾರ್ಯಪದವಿಯ ಯೋಗ, ಈ ಎಲ್ಲ ಕಾರಣಗಳಿಂದಾಗಿ 'ಇಂಗ್ಲಿಷ್ ಗೀತಗಳು' ಸಂಕಲನವನ್ನು (೧೯೨೬ರಲ್ಲಿ) ಹೊರತಂದ ಬಿ.ಎಂ.ಶ್ರೀ. ನವೋದಯ ಕಾವ್ಯದ ಪ್ರವರ್ತಕರಾದರು, ನೇತಾರರಾದರು. ಮೇಲೆ ಹೆಸರಿಸಿದವರಲ್ಲಿ ಪಂಜೆಯವರೇ ಆಗಲಿ ಪೈ ಅವರೇ ಆಗಲಿ ಕಾಲಮಾನ ದೃಷ್ಟಿಯಿಂದ ಆದ್ಯರಲ್ಲಿ ಆದ್ಯರು ಎಂಬಲ್ಲಿ ಸಂದೇಹವಿಲ್ಲ. ಅಂತೆಯೇ, ತಮ್ಮ ವರ್ಚಸ್ಸುಬೀರಿ, ಸ್ಫೂರ್ತಿನೀಡಿ, ಬೆನ್ನುತಟ್ಟಿ ತರುಣ ಕವಿಗಳ ಪೀಳಿಗೆಯನ್ನು ಸೃಷ್ಟಿಸಿದವರು 'ಶ್ರೀ' ಒಬ್ಬರೇ ಎಂಬ ಬಗೆಗೆ ಎರಡು ಮಾತಿರದು.

೧೯೧೧ರ ಸುಮಾರಿಗಾಗಲೇ (ತಮ್ಮ ೨೬ರ ಹರೆಯದಲ್ಲಿ) 'ಬಿ.ಎಂ.ಶ್ರೀ'ಯವರು ಹೊಸ ಕಾವ್ಯಮಾರ್ಗದಲ್ಲಿ ನಡೆಯಲು ಮೊದಲು ಮಾಡಿದ್ದರು ಎಂದು ಊಹಿಸಲು ಆ ವರ್ಷ ಅವರು ಧಾರವಾಡದಲ್ಲಿ ಮಾಡಿದ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಯುಗಪ್ರವರ್ತಕ ಭಾಷಣದಲ್ಲಿ ಸುಳಿವು ಸಿಕ್ಕುತ್ತದೆ. ೧೯೧೫–೧೬ರ ವೇಳೆಗೆ 'ಇಂಗ್ಲಿಷ್ ಗೀತಗಳು' ಸಂಕಲನದ ಹಸ್ತಪ್ರತಿ ಸಿದ್ಧವಾಗಿತ್ತು ಎಂದು ಕಾಣುತ್ತದೆ. ೧೯೧೯ರಲ್ಲಿ ಮೂರು. ೧೯೨೧ರಲ್ಲಿ ಇನ್ನು ಹನ್ನೆರಡು, ೧೯೨೪ರಲ್ಲಿ ಮತ್ತೆ ಇಪ್ಪತ್ತುನಾಲ್ಕು ಕವನಗಳು ಬೇರೆಬೇರೆ ಕಡೆಗಳಲ್ಲಿ ಪ್ರಕಟವಾದವು. ೧೯೨೬ ರಲ್ಲಿ "ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಸಿದ್ಧ ಹೊಂದಿದ್ದ ಕರ್ನಾಟಕ ಸಂಘದ ಅಧಿಕಾರಿಗಳು ಗ್ರಂಥವನ್ನೆಲ್ಲ ಪುಸ್ತಕ ರೂಪದಲ್ಲಿ ಹೊರತಂದರು." 'ಇಂಗ್ಲಿಷ್ ಗೀತಗಳು' ಪ್ರಕಟವಾದದ್ದೆ ತಡ, ಕನ್ನಡ ಕಾವ್ಯಪ್ರಪಂಚದಲ್ಲಿ ವಸಂತೋದಯವಾಯಿತು; ನವೋದಯ ಕಾವ್ಯ–ಯುಗಾದಿಯ ಸಡಗರ ಸಂಭ್ರಮ ನಾಡಿನ ಉದ್ದಗಲಕ್ಕೂ ಹಬ್ಬಿತು.

'ಇಂಗ್ಲಿಷ್ ಗೀತಗಳು' ಸಂಕಲನದಲ್ಲಿ 'ಕಾಣಿಕೆ' ಎಂಬ ಮೊದಲ ಕವನವನ್ನು ಹೊರತು ಪಡಿಸಿದರೆ, ಉಳಿದವೆಲ್ಲವೂ ಇಂಗ್ಲಿಷ್ ಕಾವ್ಯಭಂಡಾರದಿಂದ ಆಯ್ದು ತೆಗೆದು ಅನುವಾದಮಾಡಿದ ಕವನಗಳು. ಈ ಅನುವಾದ ಕಾರ್ಯದ ಬಗೆಗೆ ಶ್ರೀಯವರೇ ತಮ್ಮ ಆಯ್ಕೆಯ ಬಗೆಗೆ – "ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲಿಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆದುಕೊಂಡುವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈ ಮೀರದುವಾಗಿ ಕಂಡುಬಂದ ಗೀತಗಳಿವು" ಎಂದು ವಿನಯದಿಂದ ಹೇಳಿಕೊಂಡಿದ್ದಾರೆ. ಶೃಂಗಾರ ರಸವನ್ನು ಇಂಗ್ಲಿಷ್ ಕವಿಗಳು ಹೇಗೆ ಗಂಭೀರವಾಗಿ, ನವಿರಾಗಿ, ಸಹಜವಾಗಿ ಚಿತ್ರಿಸುತ್ತಾರೆ ಎನ್ನುವುದನ್ನು ತೋರಿಸುವ ಸಲುವಾಗಿ ಅಂಥ ಪದ್ಯಗಳು ಸ್ವಲ್ಪ ಹೆಚ್ಚಾಗಿ ಬಂದಿವೆ ಎಂದೂ ಸಮರ್ಥನೆ ನೀಡಿದ್ದಾರೆ. ಜನಪ್ರಿಯವಾದ ಶೃಂಗಾರದ ಜೊತೆಗೆ, ಯುದ್ಧ, ಮರಣ. ದೇಶಭಕ್ತಿ. ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಜನ್ಮದ ಸುಖ ದುಃಖಗಳು, ಇವೇ ಮುಂತಾದ ಕಾವ್ಯ ವಸ್ತುಗಳನ್ನು ಒಳಗೊಂಡಿವೆ 'ಇಂಗ್ಲಿಷ್ ಗೀತಗಳು'. ಇವು ಅನುವಾದ ಎನ್ನುವುದಕ್ಕಿಂತ ಇಂಗ್ಲಿಷಿನಿಂದ ಕನ್ನಡದಲ್ಲಿ ಆದ ಪುನಃಸ್ಸೃಷ್ಟಿ ಎನ್ನುವುದು ಸಮಂಜಸ.

'ಇಂಗ್ಲಿಷ್ ಗೀತಗಳು' ಸಂಕಲನ ಹಲವು ಮುದ್ರಣಗಳನ್ನು ಕಂಡಿದ್ದು ಅದರ ಪ್ರತಿಗಳು ಸದ್ಯಕ್ಕೆ ದೊರೆಯುತ್ತಿರಲಿಲ್ಲ. 'ಶ್ರೀ' ಜನ್ಮ ಶತಮಾನೋತ್ಸವವನ್ನು ವ್ಯಾಪಕವಾದ ರೀತಿಯಲ್ಲಿ ಪ್ರತಿಷ್ಠಾನವು ಆಚರಿಸಹೊರಟ ಈ ಸಂದರ್ಭದಲ್ಲಿ 'ಇಂಗ್ಲಿಷ್ ಗೀತಗಳು' ಸಂಕಲನಕ್ಕೆ ಬೇಡಿಕೆಗಳು ಪ್ರತಿಷ್ಠಾನಕ್ಕೆ ಬರತೊಡಗಿದವು. ಸುಲಭ ಬೆಲೆಗೆ ಪುಸ್ತಕವನ್ನು ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಹಲಕೆಲವು ಒಳ್ಳೆಯ ಕವನಗಳನ್ನು ಕೈಬಿಟ್ಟು. ಸಂಕಲನದ ಗಾತ್ರವನ್ನು ಕಡಮೆಮಾಡಿದೆ. ಜೊತೆಗೆ. ನಮ್ಮ ಜನಕ್ಕೆ ಅಷ್ಟಾಗಿ ರುಚಿಸದೆಹೋದ ಇಂಗ್ಲೆಂಡ್ ಪರವಾದ ಕೆಲವು ಕವನಗಳನ್ನು ಬಿಟ್ಟುಬಿಟ್ಟಿದೆ. ಅವರ ಸ್ವತಂತ್ರ ಕವನಗಳು ಒಂದೆರಡನ್ನು (ಕನ್ನಡ ತಾಯಿನೋಟ. ಕನ್ನಡದ ಬಾವುಟ) 'ಹೊಂಗನಸುಗಳು' ಸಂಕಲನದಿಂದ ತೆಗೆದುಕೊಂಡಿದೆ.

‘ಶ್ರೀ’ ಯವರ ಕೃತಿಗಳನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ‘ಶ್ರೀ’ ಜನ್ಮಶತಮಾನೋತ್ಸವದ ವರ್ಷದಲ್ಲಿ ಪುನರ್ಮುದ್ರಣ ಮಾಡಲು ಕೃಪೆ ಮಾಡಿ ಅನುಮತಿ ಕೊಟ್ಟಿರುವ ಅವರ ಮೊಮ್ಮಕ್ಕಳಾದ ಡಾ॥ ಎಸ್.ಜಿ. ಶ್ರೀಕಂಠಯ್ಯನವರಿಗೆ ಪ್ರತಿಷ್ಠಾನ ಋಣಿಯಾಗಿದೆ.

ಈ ಸಂಕಲನವನ್ನು ಅಣಿಮಾಡಿಕೊಟ್ಟ ಶ್ರೀ. ನಾ. ಗೀತಾಚಾರ್ಯರ ಶ್ರಮ ಸಾರ್ಥಕವಾಗಿ, ಕನ್ನಡ ಕಾವ್ಯದ ನವೋದಯ ನಿತ್ಯೋದಯವಾಗಿ ಸಲ್ಲಲಿ ಎಂದು ಹಾರೈಸುತ್ತೇನೆ.

ತ್ವರಿತವಾಗಿ ಸಿದ್ಧಗೊಳಿಸಿ ಅಚ್ಚುಮಾಡಿಸಿರುವ ಈ ಸಂಕಲನದಲ್ಲಿ ಸಂಭವಿಸಿರಬಹುದಾದ ಎಲ್ಲ ಬಗೆಯ ಲೋಪದೋಷಗಳನ್ನೂ ಸಹೃದಯರಾದ ಓದುಗರು ಗಮನಕ್ಕೆ ತಾರದೆ ನಮ್ಮ ಈ ನಮ್ರವಾದ ಕೊಡುಗೆಯನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಬೆಂಗಳೂರು
೧೯೮೪

ಎಂ. ವಿ. ಸೀತಾರಾಮಯ್ಯ
ಸಂಸ್ಥಾಪಕ ಕಾರ್ಯದರ್ಶಿಗಳು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಪರಿವಿಡಿ

ಪ್ರಾರ್ಥನೆ

ಕರಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
        ಕೈಹಿಡಿದು ನಡಸೆನ್ನನು.
ಇರುಳು ಕತ್ತಲೆಯ ಗವಿ ; ಮನೆ ದೂರ ; ಕನಿಕರಿಸಿ,
        ಕೈಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು ; ಬಲುದೂರ ನೋಟವನು
ಕೇಳೆನೊಡನೆಯೆ–ಸಾಕು ನನಗೊಂದು ಹೆಜ್ಜೆ.

ಮುನ್ನೆ ಇಂತಿರದಾದೆ ; ನಿನ್ನ ಬೇಡದೆ ಹೋದೆ,
        ಕೈ ಹಿಡಿದು ನಡಸು ಎನುತ.
ನನ್ನ ದಾರಿಯ ನಾನೆ ನೋಡಿ ಹಿಡಿದೆನು ;– ಇನ್ನು,
        ಕೈಹಿಡಿದು ನಡಸು ನೀನು.
ಮಿರುಗುಬಣ್ಣಕ್ಕೆ ಬೆರೆತು, ಭಯಮರೆತು, ಕೊಬ್ಬಿದೆನು ;
ಮೆರೆದಾಯ್ತು ; ನೆನೆಯದಿರು ಹಿಂದಿನದನೆಲ್ಲ.

ಇಷ್ಟು ದಿನ ಸಲಹಿರುವೆ ಮೂರ್ಖನನು ; ಮುಂದೆಯೂ
        ಕೈಹಿಡಿದು ನಡಸದಿಹೆಯಾ ?
ಕಷ್ಟದಡವಿಯ ಕಳೆದು, ಬೆಟ್ಟಹೊಳೆಗಳ ಹಾದು,
        ಇರುಳನ್ನು ನೂಕದಿಹೆಯಾ ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತ ?

NEWMAN (1801-1890) Lead, Kindly light.

ಕಾಣಿಕೆ

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು-
ನಲ್ಲೆಯೊಲವ ತೆರೆದು ತಂದ
ಮಾತದಾವುದು-

ಸವಿಯ ಹಾಡ, ಕಥೆಯ, ಕಟ್ಟಿ,
ಕಿವಿಯಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು-
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು-

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು;
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು.

ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು, ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು.
ಒಮ್ಮೆ ಇವಳು, ಒಮ್ಮೆ ಅವಳು,
ಕುಣಿಸುತಿರುವಳು.

ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,

ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ.

ಬಲ್ಲವರಿಗೆ ಬೆರಗೆ ಇಲ್ಲಿ?
ಅರಿಯದವರು ನಾಲ್ವರಲ್ಲಿ
ಕಳೆಯ ಬೆಳಕು ಹೊಳೆಯಲಂದು
ದಣಿದುಹೋದೆನು.

ಬಡವನಳಿಲುಸೇವೆಯೆಂದು
ಧನ್ಯನಾದೆನು.

ವಸಂತ

ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ,
ಇನಿಯರ ಬೇಟ; ಬನದಲ್ಲಿ ಬೆಳದಿಂಗಳೂಟ,
ಹೊಸ ಹೊಸ ನೋಟ, ಹಕ್ಕಿಗೆ ನಲಿವಿನ ಪಾಟ,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು,
ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು,
ಕೂವೂ, ಜಗ್ ಜಗ್, ಪುವ್ವೀ, ಟೂವಿಟ್ಟವೂ !

ಬಂದ ವಸಂತ – ನಮ್ಮಾ
ರಾಜ ವಸಂತ !

NASH (1567-1601) : Spring

ಮುದ್ದಿನ ಕುರಿಮರಿ

ಒಡಿದು ಮಂಜು ಜೀಳುತ್ತಿತ್ತು, ಚುಕ್ಕಿ ಕಣ್ಣು ಮಿಟುಕುತ್ತಿತ್ತು ;
"ಕುಡಿಯೊ, ಕಂದ, ಕುಡಿಯೊ" ಎಂದು ನುಡಿವ ಮಾತು ಕಿವಿಗೆ ಬಿತ್ತು:
ತಿರುಗಿ ನೋಡಲೊಪ್ಪೆಯಾಚೆ, ಒಬ್ಬಳಲ್ಲಿ ಹೆಣ್ಣು ಮಗಳು
ನೊರೆಯ ಬಿಳುಪು ಕುರಿಯ ಮರಿಯ ತಡವುತಿದ್ದಳು.

ಕುರಿಗಳಿಲ್ಲ ಬೇರೆ ನೆರೆಯೊಳಲ್ಲಿ ಮರಿಯದೊಂದೆ ಇತ್ತು ;
ಕೊರಳಿಗೊಂದು ಸಣ್ಣ ಹುರಿಯು ಬಿಗಿದು ಕಲ್ಗೆ ಕಟ್ಟಿ ಇತ್ತು :
ಪುಟ್ಟ ಹುಡುಗಿ ದಟ್ಟವಾದ ಹುಲ್ಲ ಮೇಲೆ ಮಂಡಿಯೂರಿ,
ಬೆಟ್ಟದಿಂದ ಬಂದ ಮರಿಗೆ ತಿಂಡಿಯಿಡುತಲಿದ್ದಳು.

ಕಿವಿಯನಲುಗಿ, ತಲೆಯನೊಲೆದು, ಬಾಲವನ್ನು ಕುಣಿಸಿ, ನಲಿದು,
ಅವಳ ಕಯ್ಯ ತಿಂಡಿಯನ್ನು ಮುದ್ದಿನಿಂದ ಸವಿವ ಮರಿಗೆ
"ಕುಡಿಯೊ, ಕಂದ ಕುಡಿಯೊ" ಎಂದು ನುಡಿವ ದನಿಯ ಕೇಳಿದೊಡನೆ,
ಅವಳ ಹೃದಯವೆನ್ನ ಹೃದಯದಲ್ಲಿ ಕಲೆತುಹೋಯಿತು.

ಕಣ್ಣಿಗಂದವಾದ ಮಗುವೊ, ಮುದ್ದುಗಾರನಾದ ಮರಿಯೊ,
ಕಣ್ಣು ನೆಟ್ಟು ನೊಡುತಿದ್ದೆನೊಲುಮೆಯಿಂದ ಜೋಡಿ ಚೆಲುವ ;
ಕುಡಿಸಿ ಮುಗಿಸಿ ಮರಿಯ ಬಿಟ್ಟು ಹುಡುಗಿ ಮನೆಗೆ ಹೊರಟಳಾಗ,
ನಡೆಯಲಿಲ್ಲ ಹತ್ತು ಹೆಜ್ಜೆ, ಹಾಗೆ ನಿಂತುಕೊಂಡಳು.

ತಿರುಗಿ ಮರಿಯನಕ್ಕರಿಂದ ನೋಡುವವಳ ಮೊಗದ ಬಗೆಯ
ಮರೆಯಲಿದ್ದ ಜಾಗದಿಂದ ಕಂಡೆನವಳು ಕಾಣದಂತೆ :
ಅಳತೆಮಾಡಿ ನುಡಿಯ ಹೆಣೆವ ವರವ ಕೊಡಲು ವಾಣಿ, ಈಗ
ಎಳೆಯ ಮರಿಗೆ ಹೀಗೆ ಹಾಡದಿರಳೆ ಎಂದುಕೊಂಡೆನು.

"ಕೊರತೆಯೇನು ಕಂದ ನಿನಗೆ? ಹುರಿಯನೇಕೆ ತುಯ್ಯುತಿರುವೆ?
ಮರೆಯದುಣಲು ಮಲಗಲೆಲ್ಲ ನೇರ್ದುಮಾಡಿ ಇರುವೆನಲ್ಲ !
ನೆಲದ ಹುಲ್ಲು ಮೆತ್ತೆಯಲ್ಲ ! ಇದಕೆ ಹಸುರೆ ಇಲ್ಲವಲ್ಲ !
ಮಲಗು, ಮರಿಯೆ, ಮಲಗು, ಕಂದ : ನಿನಗೆ ಕೊರತೆಯಾವುದು ?

ಏನು ನೀನು ಹುಡುಕುತಿಹುದು? ಮನಸಿಗೇನು ಬಯಕೆ ಇಹುದು?
ನೀನು ಬಲಿತು ಬೆಳೆಯುತಿರುವೆ : ಸೊಬಗ ಹೊಮ್ಮಿ ಹೊಳೆಯುತಿರುವೆ,
ಇಲ್ಲಿ ಗರುಕೆ ಎಳೆಯ ಗರುಕೆ, ಇಲ್ಲಿ ಹೂವಿಗಣೆಯು ಕಾಣೆ,
ಅಲ್ಲಿ ಹಸುರು ಪಯಿರು ಬೀಸಿ, ಬಿಡದೆ ಕಿವಿಯೊಳುಲಿವುದು.

ಬಿಸಿಲು ಕಾದು ಹೊಳೆವ ಹೊತ್ತು, ನಾರುಹುರಿಯನಿತ್ತ ನೀಡು.
ಬಸಿರಿಮರದ ನೆರಳ ಸೇರಿ ತಂಪು ಮಾಡಿಕೊಳ್ಳಬಹುದು,
ಗಿರಿಯ ಬಿರಿಸು ಗಾಳಿಮಳೆಗೆ ಹೆದರಿಕೊಂಡು ನಡುಗಲೇಕೆ?
ಗಿರಿಯ ಗಾಳಿಮಳೆಗಳಿಲ್ಲಿ ಕನಸಿನಲ್ಲಿ ಸುಳಿಯವು.

ಮಲಗು, ಮುದ್ದುಮರಿಯೆ, ಮಲಗು ; ಮರೆತೆಯೇನು ನಿನ್ನ ಪಾಡ ?
ಮಲೆಯ ದೂರದಿರುಬಿನಲ್ಲಿ ಅಪ್ಪ ನಿನ್ನ ಕಂಡ ದೆಸೆಯ ?
ಹಲವು ಮಂದೆ ಮೇದುವಲ್ಲಿ, ನಿನಗೆ ನೀನೆ ಎನುವರಿಲ್ಲ,
ಕೆಲದೊಳಿರದೆ ನಿನ್ನ ತಾಯಿ ಬಿಟ್ಟು ನಡೆದಳೆಲ್ಲಿಯೋ.

ತೋಳಿನಲ್ಲಿ ಎತ್ತಿಕೊಂಡ, ಮರುಕದಿಂದ ಮನೆಗೆ ತಂದ,
ಹೇಳು, ಬಂದ ಭಾಗ್ಯವುಳಿದು, ಎಲ್ಲಿ ಅಲೆಯುವಾಸೆ ಕಂದ ?
ಸಾಕುತಿಹೆನು ತಾಯಿಯಂತೆ – ಈದ ತಾಯಿ ಬೆಟ್ಟದಲ್ಲಿ
ಸಾಕಿ ಸಲಹುತಿದ್ದಳೇನು, ಇಷ್ಟು ಪ್ರೀತಿ ತೋರುತ ?

ಎರಡು ಸಾರಿ, ಹಗಲು ಹೊತ್ತು, ನನ್ನ ಪುಟ್ಟ ತೊಟ್ಟಿಯಲ್ಲಿ,
ತೊರೆಯ ತಿಳಿಯ ನೀರ ತಂದು, ನೀನೆ ಬಲ್ಲೆ ಕುಡಿಸುತಿರುವೆ ;
ಎರಡು ಸಾರಿ, ಮಂಜು ಬಿದ್ದು, ಹೊಲಗಳೆಲ್ಲ ನೆನೆದ ವೇಳೆ
ಕರೆದು ಬಿಸಿಯ ನೊರೆಯ ಹಾಲು, ಹೊಸದ ತಂದು ಹೊಯ್ಯುವೆ

ಬೇಗ ಮಯ್ಯಿ ತುಂಬಿಕೊಂಡು, ಕಾಲು ಬಲಿತು ನೆಗೆಯ ಬಲ್ಲೆ,
ಆಗ ನನ್ನ ಪುಟ್ಟ ಬಂಡಿ ಕಟ್ಟಿಕೊಡುವೆ, ಎಳೆಯುವಂತೆ.
ನನ್ನ ಜೊತೆಯೊಳಾಟವಾಡಿ, ಚಳಿಯ ಗಾಳಿ ಕೊರೆಯುವಾಗ,
ನನ್ನ ಬಳಿಯೆ ರೊಪ್ಪವಾಗಿ, ಕೆಡೆಯುವಂತೆ ಬೆಚ್ಚಗೆ.

ಮಲಗ ಒಲ್ಲದೊಲ್ಲದೇಕೊ, ಪ್ರಾಣಿ ಪಾಪ ! ಮನಸಿನೊಳಗೆ
ಸುಳಿದು ಬಂದ ತಾಯ ನೆನಹು ತೊಳಲುತಿಹದೊ ಏನೊ ಅರಿಯೆ ;
ನನಗೆ ತಿಳಿಯದಂತೆ ನಿನಗೆ ಪ್ರೀತಿಯಾದುದಾವುದಿಹುದೊ.
ಕನಸಿನೊಳಗೆ ಹೊಳೆದದಾವ ನೋಟ ಪಾಟ ಸೆಳೆವುದೋ !

ಗಿರಿಯ ನೆತ್ತಿ ಏನು ಹಸುರು, ಏನು ಚೆಲುವು ನೋಡಲಯ್ಯೊ !
ಬರುವುವೆಂದು ಕೇಳಿ ಬಲ್ಲೆನಲ್ಲಿ ಬಿರುಸುಗಾಳಿ ಮಬ್ಬು,
ಎಳೆಯ ಮಗುವಿನಂತೆ ನಗುತ ನಗುತ ನೆಗೆವ ತೊರೆಗಳಲ್ಲಿ
ಮುಳಿಸು ಬರಲಿ, ಎರೆಗೆ ಹಸಿದ ಸಿಂಹದಂತೆ ಮೊರೆವುವು.

ಎರಗಲಾರದಿಲ್ಲಿ ಹದ್ದು, ಅದಕೆ ಬೇದರ ಕೆಲಸವಿಲ್ಲ,
ಇರುಳು ಹಗಲು ಭದ್ರವಿಲ್ಲಿ, ಹಟ್ಟಿ ಇಹುದು ಪಕ್ಕದಲ್ಲಿ.
ಅಳುಕಿ ಏಕೆ ಅರಚಿಕೊಳುವೆ? ಹುರಿಯು ತುಯ್ದು ಹಿಂದೆ ಬರುವೆ ?
ಮಲಗು, ಕಂದ ಬೆಳಕುಹರಿದ ಗಳಿಗೆ ಬಂದು ಕಾಣುವೆ."

ತಳುಗಿ, ತಳುಗಿ, ಹೆಜ್ಜೆಯಿಟ್ಟು, ಮನೆಯ ಕಡೆಗೆ ನಡೆಯುವಾಗ,
ಹಲವು ಸಾರಿ ಹಾಡನಿದನು ನನಗೆ ನಾನೆ ಹೇಳಿಕೊಂಡೆ,
ಪದವನೆಲ್ಲ ಪಂಕ್ತಿ ಪಂಕ್ತಿಯಾಗಿ ಮಗುಚಿ ನೋಡುವಾಗ,
ಪದದೊಳವಳದರ್ಧಮಾತ್ರ, ಅರ್ಧ ನನ್ನದೆನಿಸಿತು.

ತಿರುಗಿ, ತಿರುಗಿ, ಪದವನಿದನು ನನಗೆ ನಾನೆ ಹೇಳಿಕೊಂಡೆ ;
ಅರೆಗೆ ಹೆಚ್ಚೆ ಹೆಣ್ಣ ಪಾಲು ಎಂದು ತೋರಿತೇಕೆ ಎನಲು,
ಅವಳ ಕಣ್ಣ ನೋಟದಿಂದ ; ಅವಳ ನುಡಿಯ ಮರುಕದಿಂದ,
ಅವಳ ಹೃದಯವೆನ್ನ, ಹೃದಯದಲ್ಲಿ ಕಲೆತುಹೋಯಿತು.

WORDSWORTH ; The Pet Lamb

ಕಾಳಗದ ಪದ

ಕಾಳೆ, ಹರೆ, ಕೊಂಬುಗಳ
ಏಳಿ, ಮೊಳಗಿ, ಏಳಿ,
ನಾಡುಗಳ ಕುಳಗಳನು
ಕೂಡಿಕೊಳ ಹೇಳಿ.
ಬನ್ನಿರಣ್ಣ, ಬನ್ನಿರಣ್ಣ,
ಅದೊ ಕೂಗು, ಕೇಳಿ.
ಮನ್ನೆಯರ, ಬಂಟರಿರ,
ಒದಗಿ, ಏಳಿ, ಏಳಿ.

ಕಣಿವೆಗಳ, ಬೆಟ್ಟಗಳ
ಗಡಿಯಿಂದ ಬನ್ನಿ.
ಕಣೆ, ಬಿಲ್ಲು, ಕುಡುಗೋಲು,
ಕೊಡಲಿಗಳ ತನ್ನಿ.

ಕೆಚ್ಚೆದೆಯ ಮಕ್ಕಳಿರ,
    ಮೈಜೋಡ ತೊಡಿರೊ !
ಬಿಚ್ಚುಗತ್ತಿಯ ಝಳವ
    ಕೈಝಾಡಿಸಿಡಿರೋ !

ಬಿಡಿ ಇರಲಿ ಮಂದೆಗಳು,
    ಹೊಸ ಉತ್ತ ಮಣ್ಣು.
ಬಿಡಿ ಇರಲಿ ಸತ್ತ ಹೆಣ,
    ಹಸೆಮಣೆಯ ಹೆಣ್ಣು.
ಬಿಡಿ ಹುಲ್ಲೆ, ಬಿಡಿ ಹಂದಿ,
    ಬಲೆದೋಣಿಗಳನು,
ಹಿಡಿದುಕೊಳಿ ಮುಟ್ಟುಗಳ,
    ಹಲಗೆ ಕತ್ತಿಯನು.

ಕಾಡ ಸೀಳುತ ಗಾಳಿ
    ಬರುವಂತೆ ಬನ್ನಿ
ಓಡ ಕೊಚ್ಚುತ ಕಡಲು
    ಬರುವಂತೆ ಬನ್ನಿ.
ಓಡಿ ಬನ್ನಿ, ಓಡಿ ಬನ್ನಿ,
    ಓಡಿ ಓಡಿ ಬನ್ನಿ
ಗೌಡ, ಕುಳ ; ಆಳು, ದಣಿ ;
    ನಾಡ ದಳ ಬನ್ನಿ.

ಬಂದರಣ್ಣ ಬಂದರಣ್ಣ
    ಕಿಕ್ಕಿರಿದು ನೆರೆದು,
ಚೆಂದದಲಿ ಹೂವು ಗರಿ
    ಸಿಕ್ಕಿ ತಲೆ ಮೆರೆದು–
ಹಿರಿ, ಕತ್ತಿ ! ಇರಿ, ಸುರಗಿ !
    ಸರಿ, ಮುಂದೆ, ಆಳು !
ಅರಿಯೆದೆಯ ಬಿರಿ, ಕಾಳೆ !
    ತರಿ, ಕೊಲ್ಲ ಹೇಳು :

SCOTT (1771-1832) : Gathering Song.

ಮಾದ ಮಾದಿ

ಬೇಟಿಕಾರ ಬಂದ ಮಾದ.
  ಹಹ್ಹ ! ಏನು ಬೇಟವೋ !
ಬೇಡಿ ಸತ್ತು ಸುಣ್ಣವಾದ,
  ಹಹ್ಹ ! ಏನು ಬೇಟವೋ !
ಮಾದಿ ಕತ್ತನೊಲೆದುದೇನು !
ಅತ್ತ, ಇತ್ತ, ಸಿಡಿದುದೇನು !
ಮಾದ, ಪಾಪ, ಮಿಡಿದುದೇನು !
  ಹಹ್ಹ ! ಏನು ಬೇಟವೋ !

ಕಯ್ಯ ಮುಗಿದ, ಕಾಲ ಹಿಡಿದ.
  ಹಹ್ಹ ! ಏನು ಬೇಟವೋ !
ರೊಯ್ಯನೊದೆಯೆ, ಹಲ್ಲ ಕಡಿದ,
  ಹಹ್ಹ ! ಏನು ಬೇಟವೋ !
ಬೆಚ್ಚಗುಸಿರ ಬಿಟ್ಟ, ಮಾದ,
ಅತ್ತ, ಕಂಗೆಡುತ್ತ ಸೀದ,
ಹೊಳೆಯ ಬೀಳಲೆಂದು ಪೋದ !
  ಹಹ್ಹ ! ಏನು ಬೇಟವೋ !

ಆವ ಗಳಿಗೆಗಾದ ಮನಸು !
  ಹಹ್ಹ ! ಏನು ಬೇಟವೋ !
ಒಲ್ಲದಾಕೆಗೊಲುಮೆ ಕನಸು
  ಹಹ್ಹ ಏನು ಬೇಟವೋ !
ಹುಚ್ಚ ನಾನು ! ಸಾಯಲೇಕೆ ?
ಜಂಬಗಾತಿ ಜರೆಯಲೇಕೆ ?
ಜರ್ಬು ನನಗೆ ! ಹೆಣ್ಣಿಗೇಕೆ ?
  ಹಹ್ಹ ! ಏನು ಬೇಟವೋ !

ವೈದ್ಯರಿದನು ತಿಳಿದು ಹೇಳಿ,
　　ಹಷ್ಟ ! ಏನು ಬೇಟವೋ !
ಎದ್ದನವನು-ಬಿದ್ದಳಿವಳು.
　　ಹಷ್ಟ ! ಏನು ಬೇಟವೋ !

ಏನೊ ಎದೆಯೊಳಿರಿಯುತಿಹುದು,
ಸುಯ್ದು, ಸುಯ್ದು ತಣ್ಣಗಹುದು,
ಕಣ್ಣೊ, ಒಂದ ನುಡಿಯುತಿಹುದು !
　　ಹಷ್ಟ ! ಏನು ಬೇಟವೋ !

ಚೆನ್ನದಂತ ಹುಡುಗ ಮಾದ,
　　ಹಷ್ಟ ! ಏನು ಬೇಟವೋ !
ಸಾಯಲಾದ ಹುಡುಗಿ ಮಾದಿ,
　　ಹಷ್ಟ ! ಏನು ಬೇಟವೋ !
ಕೊಲ್ಲಲಾರನವಳ ಮಾದ,
ಮುನಿಸು ಕರಗಿ ಮರುಗಿಹೋದ,
ಈಗ ಹಿಡಿಯದವರ ಮೋದ !
　　ಹಷ್ಟ ! ಏನು ಬೇಟವೋ !

BURNS : Duncan Gray

ಬಿಂಕದ ಸಿಂಗಾರಿ

ಚಿಮ್ಮುತ ನಿರಿಯನು ಬನದಲಿ ಬಂದಳು
　　ಬಿಂಕದ ಸಿಂಗಾರಿ ;
ಹೊಮ್ಮಿದ ಹಸುರಲಿ ಮೆರೆಯಿತು ಹಕ್ಕಿ
　　ಕೊರಲಿನ ದನಿದೋರಿ.

ಹೇಳೆಲೆ ಹಕ್ಕಿ, ಚೆಲುವನು ಸಿಕ್ಕಿ,
　　ನನಗೆ ಮದುವೆಯೆಂದು ?
ಆಳಿಬ್ಬಿಬ್ಬರು ಕೇರಿಯ ಸುತ್ತಿ,
　　ಹೆಗಲಲಿ ಹೊತ್ತಂದು !

ಹಕ್ಕಿಯೇ ಹೇಳೈ, ಒಸಗೆಯ ಮಂಚವ
ಸಿಂಗರಿಸುವರಾರು ?
ಸೊಕ್ಕಿನ ಹೆಣ್ಣೇ, ಮಣ್ಣಲಿ ಕುಳಿಯನು
ಆಳದಿ ತೆಗೆಯುವರು.

ಅಡವಿಯ ಮುಳ್ಳಲಿ ಮಿಂಚಿನ ಹುಳುಗಳು
ಪಂಜನು ಹಿಡಿಯುವವು.
ಗಿಡಗಳ ಹೊಳ್ಳಿನ ಗೂಬೆಗಳೆಲ್ಲಾ
ಬಾ ಹಸೆಗೆನ್ನುವುವು !

SCOTT (1771-1832) : Proud Maisie

ದುಃಖಸೇತು

ಅನಾಥೆ ಇವಳಿನ್ನೊಬ್ಬ –
ಳೀ ಜನ್ಮರೋಸಿ,
ವೇದೆಯನು ತಾಳದೆಯೆ
ಮುಳುಗಿದಳು ಹೊಳೆಗೆ.

ಮೆಲ್ಲಗಿವಳನು ಮುಟ್ಟು,
ಮರುಗಿ ಹಿಡಿದೆತ್ತು,
ಏನು ಕೋಮಲಕಾಯ !
ಹೊಳಪು ಹೊಸಪ್ರಾಯ.
ನೋಡು, ಮೈಯೊಳಗುಡಿಗೆ
ತೊಯ್ದು ಹತ್ತಿಹುದು :
ತೋಡಿ, ತೊರೆತೊರೆಯಾಗಿ
ಹೊಳೆ ಬಸಿಯುತಿಹುದು.
ಎದೆಗರಗು, ಬಾ, ಎತ್ತು,
ಮಾಕರಿಸದೊಲಿದು.

ಮುಡುಕಿ ಕಟ್ಟನು ಮೀರಿ,
ಕೆಟ್ಟವಳು ಇವಳು,
ತಾನು ಮಾಡಿದ ಕರ್ಮ
ತನ್ನ ಬೆನ್ನಲಿ ಬಂದು
ಸುಟ್ಟವಳು ಇವಳು ;
ಎನುತ ದೋಷವ ಬೆದಕಿ
ಗದರದಿರು ನೀನು.
ಅವಳ ಪಾಪಗಳೇನೊ,
ಹೊಲ್ಲನಡೆಯೇನೊ,
ಅದರೆಣಿಕೆಗಿದೆ ಹೊತ್ತು?
ನಾವೆ ಜರೆವವರು?

ಜವರಾಯ ನುಂಗಿದೀ
ಹೆಣ್ಣು ಮಗುವಿನಲಿ
ಹೊರೆದ ಕಲ್ಮಷ ತೊಳೆದು,
ಈಗ ತಾನುಳಿದಿಹುದು,
ಚೆಲುವಾದ, ನಿರ್ಮಲದ
ಹೆಣ್ಣುತನವೊಂದು !

ಏನು ಕರೆಗಳೆ ಇರಲಿ,
ಹೆಣ್ಣು ಹುಟ್ಟಿಹುದು.
ಒರಸು ಆ ತುಟಿಗಳನು,
ಕೆಸರೊಸರುತಿಹುದು.
ಕಟ್ಟು ಕೂಡಿಸಿ ಕುರುಳ,
ಕರಿಯ ಸೊಂಪಿನ ಕುರುಳ,
ಅದ್ದಿ ಕೆದರಿಹುದು.
ಆರಿವಳು ? ಮನೆಯೆಲ್ಲಿ ?
ಬಲ್ಲವರು ಯಾರು ?

ಇವಳ ತಂದೆಯದಾರು ?
ಇವಳ ತಾಯಿಯದಾರು ?
ಅಕ್ಕತಂಗಿಯರಿಹರೆ ?
ಅಣ್ಣತಮ್ಮದಿರು?
ಇನ್ನು ಅಕ್ಕರೆಯಾತ
ಇನ್ನು ಹತ್ತಿರದಾತ

ಮತ್ತೊಬ್ಬನಿಹನೊ?
ನಿರಿಹಿಡಿದು, ನಡುವೇರಿ,
ತೊದಲುಮಾತನು ಬೀರಿ,
ಕೊರಗ ನಗಿಸಲು ಬಲ್ಲ
ಮಗುವಿಲ್ಲವೇನೋ?

ಆಹ, ಎಲ್ಲಡಗಿತೋ
ಆರ್ಯಧರ್ಮದ ಕರುಣ,
ಆರ್ಯಜನಗಳ ಮರುಕ,
ಉರಿಯುವನೆಬಲ್ಲ !
ಅಯ್ಯೊ, ಏನನ್ಯಾಯ,
ತುಂಬಿದೀ ಊರಲ್ಲಿ,
ಮನೆ ಇವಳಿಗಿಲ್ಲ,
ತುಂಬಿದೀ ಜನದಲ್ಲಿ
ನೆರೆ ಇವಳಿಗಿಲ್ಲ.
ಅನಾಥೆ ಹಾ, ದಿಕ್ಕಿಲ್ಲ,
ಮರಣವೇ ಶರಣು.

ಹೆತ್ತವರ ಪ್ರೇಮವೋ,
ಸೋದರರ ಪ್ರೇಮವೋ,
ಕೂಡಿದನ ಪ್ರೇಮವೋ,
ಮಕ್ಕಳಲಿ ಪ್ರೇಮವೋ,
ಯಾವುದೂ ಹಿಡಿಯದೆಯೆ
ತಡೆಯದೆಯೆ ಹೋಯ್ತೆ ?
ನಿಷ್ಕರುಣರಲಿ ಬೆಂದು,
ಪ್ರೇಮಸಾಗರದಮೃತ
ಬಯಲುದೊರೆಯಾಯ್ತೆ ?
ದೀನರಕ್ಷಕ ಮೊರೆಯ
ಕೇಳಿ ಕಾಪಾಡುವುದು
ತನಗೆ ಹುಸಿಯಾಯ್ತೆ ?
ಏನು ಬಂತೋ ದುಃಖ,
ಏನು ಬಂತೋ ರೋಷ,
ಕ್ರೂರಮನಸನು ಮಾಡಿ
ಬೀರಿದಳು ಬದುಕ !

ಊರ ಮನೆಬೆಳಕುಗಳು
    ದೂರ ಸರಿಯುತ್ತ,
ಕತ್ತಲೆಯ ಹೊಳೆ ಹರಿದು
    ಹತ್ತಿರಕೆ ಬರುತ,
ಚಳಿಗಾಲ ಸೋಕಿದರೆ
    ಬೆಚ್ಚಿ ನಡುಗುವಳು,

ಬೆಚ್ಚಿದಳೆ, ನಡುಗಿದಳೆ,
ಹೆದರಿದಳೆ ಹೊಳೆಗೆ ?
ಹುಚ್ಚು ಹಿಡಿಸಿದ ಹಾಳು
    ಬಾಳ ತೆಗೆದೊಗೆದು,
ಏನಿದೆಯೊ ಅರಿಯದಿಹ
    ಸಾವ ಕೆಳೆಬಗೆದು,
ಎಲ್ಲಾದರೂ ಸರಿಯೆ,
ಎಲ್ಲಾದರೂ ಸರಿಯೆ,
ಈ ಲೋಕ ಬೇಡೆಂದು
    ಹಾರಿದಳು ನೆಗೆದು.

ಹಾರಿದಳು, ಮುಳುಗಿದಳು.
ತೇಲಿದಳು, ಕೊಚ್ಚಿದಳು,
    ಕೊರೆವ ಹೊಳೆಯೊಳಗೆ,
ಎಲವೊ ಕಾಮುಕ, ಕಟುಕ,
ಇಲ್ಲಿ ಬಾ, ನೋಡು ಬಾ
ಎಲ್ಲಿ ಬೆಚ್ಚಗೆ ಮಲಗಿ
ಸಲ್ಲಾಪ ಮಾಡುತಿಹೆ.
ಈಗ ಬಾ, ನೋಡು ಬಾ,
ಇವಳೊಡನೆ ಮುಳುಗು ಬಾ,
    ಮುಳುಗು ಬಾ, ಪಾಪಿ !

ಮೆಲ್ಲಗಿವಳನು ಮುಟ್ಟು,
    ಮರುಗಿ ಹಿಡಿದೆತ್ತು.
ಏನು ಕೋಮಲಕಾಯ !
    ಹೊಳಪು ಹೊಸಪ್ರಾಯ !

ಕೈಕಾಲುಗಳ ಸವರಿ
    ಮೃದುವಾಗಿ ಮಡಿಸು ;
ಬಿರುಗಣ್ಣ ನೋಟವನು
    ರೆಪ್ಪೆಯಲಿ ಕವಿಸು ;–
ಜರೆಯುವರ, ಹಳಿಯುವರ,
ಕೊರೆಯುವರ, ತುಳಿಯುವರ,
    ಕಿವಿ ಕೇಳಿ ಕೇಳಿ,
ಹಲ್ಲುಮುಡಿಯನು ಕಚ್ಚಿ
ಕಲ್ಲುಮನಸಾದಾಗ
    ನೆಟ್ಟುದೀ ನೋಟ !

ಮುಂದ ಬಲ್ಲವರಾರು ?
    ಇಂದಾಯ್ತು ಶಾಂತಿ.
ದೇವ ಮಾಡುವುದಿರಲಿ,
ನಾವು ಮಾಡುವ ಹಿಂಸೆ,
    ಅದೆ ನರಕಹಿಂಸೆ !
ದುಃಖಿಗಳ, ಪಾಪಿಗಳ
ನಾವು ಧಿಕ್ಕರಿಸುವೆವು
    ದೂರ ಅಟ್ಟುವೆವು.
ಅಟ್ಟನಾ ರೀತಿಯಲಿ
    ತಂದೆ, ರಕ್ಷಕನು.
ದೈನ್ಯದಲಿ, ಮೌನದಲಿ
ತನ್ನ ಪಾಪವನೊಪ್ಪಿ
ಮರೆಹೊಗುವನಾಥೆಯನು
ಎದೆಯಲ್ಲಿ ಕೈಮುಗಿಸಿ
    ಅವನ ಬಳಿ ಕಳುಹು.

HOOD (1799-1845) : Bridge of sighs.

ನನ್ನ ಪ್ರೇಮದ ಹುಡುಗಿ

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು,
ತಾವರೆಯ ಹೊಸ ಅರಳ ಹೊಳೆವ ಕೆಂಪು.
ನನ್ನ ಪ್ರೇಮದ ಹುಡುಗಿ ಕೊಳಲ ಮೆಲುನುಡಿಯಿಂಪು,
ಕೊಳಲು ಮೋಹಿಸಿ ನುಡಿವ ಗಾನದಿಂಪು.

ಬೆಳೆಬೆಳೆಯುತೆಷ್ಟೆಷ್ಟು ಬಿನ್ನಾಣ, ಎಲೆ ಚೆಲುವೆ,
ಮುಳುಗಿದೆನು ಅಷ್ಟು ಪ್ರೇಮದೊಳಗೆ.
ಬತ್ತುವುವು ಕಡಲುಗಳು ಮುಂದಾಗಿ, ಎಲೆ ಚೆಲುವೆ,
ಬತ್ತಲಾರದು ತೊಟ್ಟು ಪ್ರೇಮದೊಳಗೆ.

ಬತ್ತುವುವು ಮುಂದಾಗಿ ಕಡಲುಗಳು, ಎಲೆ ಚೆಲುವೆ,
ಕರಗುವುವು ಬಂಡೆಗಳು ಬಿಸಿಲಿನೊಳಗೆ,
ಕರಗಲಾರದು ಚೂರು ಪ್ರೇಮದೊಳಗೆಲೆ ಚೆಲುವೆ,
ಬೆರೆದಿರಲು ಜೀವಕಳೆ ದೇಹದೊಳಗೆ.

ಹೋಗಿ ಬರುವೆನೆ ಹೆಣ್ಣೆ, ಪ್ರೇಮದೊಂದೇ ಹೆಣ್ಣೆ,
ಹೋಗಿ ಬರುವೆನು ಸಹಿಸು, ಎರಡು ಗಳಿಗೆ.
ಕೋಟಿಯೋಜನವಿರಲಿ, ದಾಟಿಬರುವೆನು, ಹೆಣ್ಣೆ,
ಬೇಗ ಬರುವೆನು ಹಾರಿ ನಿನ್ನ ಬಳಿಗೆ.

BURNS ; O my love's like a red, red rose

ಸುಖಜೀವನ

ಏನು ಸುಖಿಯೋ ತಾನು ಹುಟ್ಟಿನಲಿ ಕಲಿಕೆಯಲಿ,
ಇನ್ನೊಬ್ಬನಿಚ್ಛೆಯನು ದುಡಿಯದಿರುವವನು !
ಒಳ್ಳಿತನು ಬಗೆವುದೇ ತನ್ನ ಕಾಯುವ ಯಂತ್ರ,
ನಿಜದ ನಡೆತೆಯೆ ತಂತ್ರ ತನಗೆನಿಸಿದವನು.

ರಾಗಗಳು ತನಗೊಡೆಯರಾಗದವೊಲಾಳುವನು,
ಜೀವವನು ಸಾವಿಗಣಿಮಾಡಿ ಬಾಳುವನು.
ಎಂತು ಧಣಿಯೊಲವೆಂದು, ನೆರೆಯ ಮೆಚ್ಚೆಂತೆಂದು,
ಮಿಡುಮಿಡುಕಿ ಲೋಕವನು ಕಟ್ಟಿಕೊಳದವನು.

ನಾಡಾಡಿಗಳ ಬಾಯ ಬಳಕೆಯಲಿ ನಾಟದೆಯೆ,
ತನ್ನಾತ್ಮಸಾಕ್ಷಿಯೇ ಕೋಟೆಯಾದವನು,
ಹೊಗಳುವರು ನೆರೆದುಂಡು ತೇಗದವನಿದ್ದಾಗ,
ಬಿದ್ದಾಗ ಬಗುಳುವರು ಜರೆದುಕೊಳದವನು.

ಕೆಟ್ಟತನದಲಿ, ದೆಸೆಯಲೇರುತಿರಲೊಬ್ಬಾತ,
ಕಂಡದನು ಕುದಿಗೊಂಡು ತಾ ಕರುಬದವನು.
ನಗುನಗುತ ನೆರವ ಚುಚ್ಚುವ ಮಾತು ಬರದವನು;
ಧರ್ಮವಲ್ಲದೆ ಬೇರೆ ಸೂತ್ರವಿರದವನು.

ನಿನ್ನ ಕೃಪೆ ಇರಲಿ, ಸಿರಿ ಏನೆಂದು ದೇವರನು
ಬೆಳಗು ಬಯ್ಗು ಬಿಡದೆ ಬೇಡುತಿರುವವನು.
ಕೇಡಿನಲಿ ಕೈಯಿಡದೆ, ತನ್ನೊಪ್ಪಿನೋದಿನಲಿ,
ಕೆಳೆಯನಲಿ, ತಾ ಹೊತ್ತಕಳೆದು ನಲಿವನು.

ಈ ಬಗೆಯ ಮುಕ್ತನಿಗೆ ತೊತ್ತುಗಳ ತೊಡರಿಲ್ಲ,
ಏರುವಾಸೆಗಳಿಲ್ಲ, ಬೀಳುವಳುಕಿಲ್ಲ.
ಹೊನ್ನುಮಣ್ಣಿಲ್ಲದೊಡೆ, ತನ್ನೊಡೆಯ–ತಾ ಬಲ್ಲ !
ಒಂದು ತನಗಿಲ್ಲದೆಯೆ, ಉಂಟು ತನಗೆಲ್ಲ !

SIR HENRY WOTTON (1568-1639) Character of a Happy Life

ಹೇಳದಿರು ಹೋರಾಡಿ ಫಲವಿಲ್ಲವೆಂದು

ಹೇಳದಿರು ಹೋರಾಡಿ ಫಲವಿಲ್ಲವೆಂದು,
ತೋಳ ದಣಿಸಿದೆ ಬರಿದೆ ಘಾಸಿಯಾಯ್ತೆಂದು ;
ಗೆಲ್ಲುವುದು ಕಾಣೆ, ಹಗೆ ಹಿಮ್ಮೆಟ್ಟನೆಂದು ;
ಎಲ್ಲ ಇದ್ದಂತಿಹುದು – ಅಲ್ಲಾಡದೆಂದು.

ನೆಚ್ಚಿ ಕೆಡುವೊಡೆ ಕೆಚ್ಚು, ಸೆಡೆದಳುಕು ಕೆಡದೆ ?
ಮುಚ್ಚಿ ಆ ಹೊಗೆಯೊಳಗೆ, ಈ ಗಳಿಗೆ, ಬಿಡದೆ,
ನಿನ್ನ ಕೆಳೆಯರು ಹಗೆಯ ತರುಬತಿರಬಹುದು–
ನಿನ್ನ ಬೆಂಬಲವಿದ್ದು, ಕಳನ ಗೆಲಬಹುದು !

ತೆರೆ ಬಳಲಿ, ಹೊಯ್ದು ಹೊಯ್ದುರುಳುರುಳಿ, ಚೆಲ್ಲಿ,
ಬೆರಳುನೆಲವನು ಕೊಳದೆ ಕುದಿಯುತಿಹುದಿಲ್ಲಿ–
ಬಲುಹಿಂದೆ, ಕೊರಕಲಲಿ, ಕೋವಿನಲಿ ತೂರಿ
ಉಲಿಯದೆಯೆ ಬಾರದೇ ಕಡಲಲೆಯ ಬೀರಿ !

ಬೆಳಗಾಗ ಮೂಡದೆಸೆಬಾಗಿಲೊಳೆ ಬರದು,
ಬೆಳಕು ತಾ ಬರುವಂದು, ಹೊಸ ಬೆಳಕು ಹರಿದು ;
ಮುಂದೆ ಮೆಲ್ಲಗೆ ಮೆಲ್ಲಗೇರುವುದು ಹೊತ್ತು –
ಹಿಂದೆ ಪಡವಲು ನೋಡು–ನೆಲದ ಸಂಪತ್ತು !

CLOUGH (1819-1861) : Say not the struggle naught availeth.

ಇರುಳ ದೇವಿ

ಬೇಗ ಪಡುವ ತೆರೆಯ ತುಳಿದು
  ಇರುಳ ದೇವಿ, ಬಾ.
ಮಬ್ಬುಗವಿಯೊಳೊಬ್ಬಳಿದ್ದು,
ಹಗಲು ಸಮೆಯದಾಗ ಹೆಣೆದ
ಸೊಗದ ಭಯದ ಕನಸ ಬೀರಿ,
ಉಬ್ಬಿಸುತ್ತ, ಬೆದರಿಸುತ್ತ,
  ಬಾ, ಬೇಗ, ಬಾ.

ಅರಿಲ ಹೂವು ನೆಯ್ದ ಕಪ್ಪು
  ದುಗುಲವುಟ್ಟು ಬಾ.
ಹಗಲ ಕಣ್ಗೆ ಕುರುಳ ಕವಿಸಿ,
ಮುತ್ತುಕೊಟ್ಟು ದಣಿಸಿ ಕಳಿಸಿ,
ಸುತ್ತ ಸುಳಿದು, ನಾಡಿಲ್ಲಿ
ಮಂಕು ತಳಿದು, ಶಂಕೆಯಳಿದು
  ಅರಸುವೆನಗೆ ಬಾ.

ಕರಗಿ ಮಂಜು, ಬೆಳಕು ಬರಲು,
  ನಿನಗೆ ಸುಯ್ದೆನು.
ಅರಳ ತಳಿರ ಮೇಲೆ ಬಿಸಿಲ
ಹೊರೆಯ ಹೇರಿ, ಏರಿ ಹಗಲು
ಬೇಡವಾದ ಬಳಗದಂತೆ
ಕಾಡಿ ತಂಗುತಿರಲು, ಬಾಡಿ
ನಿನಗೆ ಸುಯ್ದೆನು.

ನಿನ್ನ ತಮ್ಮ ಸಾವು ಬಂದು,
  ವರಿಸು ಎಂದನು.
ನಿನ್ನ ಕಂದ ನಿದ್ದೆ ಬಂದು,
ಕಣ್ಣ ಹೊಸಕಿ, ಜೇನ ಮುಸುಕಿ,
ಅಪ್ಪಿಕೊಳಲೆ, ಬಳಿಯೊಳೊರಗಿ ?
ಒಪ್ಪು, ನಲ್ಲೆ ಎಂದನದಕೆ
  ಒಲ್ಲೆ ಎಂದೆನು.

ನೀನು ಸತ್ತಮೇಲೆ ಸಾವು,
  ಬೇಗ, ಆಗಲೇ !
ನೀನು ಹೋದಮೇಲೆ ನಿದ್ದೆ -
ಕೇಳಬಲ್ಲೆ ವರವನವರ,
ಕೇಳಿಕೊಳುವೆನಮ್ಮ ನಿನ್ನ,
ಒಲುಮೆಯಿರುಳೆ, ಬಯಕೆ ಸಲಿಸು
  ಬೇಗ, ಬಾ, ಬಾ.

ಮುದಿಯ ರಾಮಗೌಡ

ಕುರಿಗಳೆಲ್ಲಾ ರೊಪ್ಪದಲ್ಲಿ, ದನಗಳೆಲ್ಲಾ ತೊಟ್ಟಿಯಲ್ಲಿ,
ಜನಗಳೆಲ್ಲಾ ಹಟ್ಟಿಯಲ್ಲಿ ಬಳಲಿ ಕೆಡೆದರು ತೆಪ್ಪಗೆ ;
ಗಂಡ ಗೊರಕೆಹೊಯ್ಯುತಿಹನು ನಿದ್ದೆ ಕವಿದು ಮಗ್ಗುಲಲ್ಲಿ–
ನನಗೋ ಹೊಟ್ಟೆಯ ದುಃಖವೆಲ್ಲಾ ಕಣ್ಣ ಹನಿಯಲಿ ಸುರಿವುದು.

ಚಿಕ್ಕ ಹರೆಯದ ಚಾಮನೊಲಿದು ಮದುವೆಗೆನ್ನ ಬಯಸುತ್ತಿದ್ದ.
ಮಾತನೆತ್ತಲು ರೊಕ್ಕವಿಲ್ಲದೆ ನಾಚಿ ಸುಮ್ಮನೆ ಇರುವನು.
ದುಡ್ಡು ಕಾಸನು ಕೂಡಿಹಾಕಲು ಹೋಗಿ ಹಡಗ ಸೇರಿಕೊಂಡ–
ದುಡ್ಡುಕಾಸನು ನನ್ನ ಸಲುವೇ ಕೂಡಿಹಾಕಲು ಹೋದನು.

ಅವನು ಹೋಗಿ ನೆಟ್ಟಗೆಲ್ಲಾ ಒಂದು ವಾರ ಕಳೆಯಲಿಲ್ಲ.
ಅಪ್ಪ ಕೈಯ ಮುರಿದುಕೊಂಡ; ಕಳ್ಳರೊಯ್ದರು ದನವನು.
ಅವ್ವ ನರಳುತ ಬಿದ್ದುಕೊಂಡಳು, ಚಾಮ ಎತ್ತಲೋ ಕಡಲಲಿದ್ದನು.
ಇತ್ತ ಮುದಿಯ ರಾಮಗೌಡ ನನ್ನ ಬಯಸಿ ಬಂದನು.

ಅಪ್ಪ ಹೊರಗೆ ಗೆಯ್ಯಲಾರ, ಅವ್ವ ಒಳಗೆ ನೆಯ್ಯಲಾರಳು ;
ಹಗಲು ಇರುಳು ನಾನು ದುಡಿದೂ ನಮಗೆ ಹಿಟ್ಟು ಹುಟ್ಟದು.
ರಾಮಗೌಡ ಕಷ್ಟಕಾದ : ಕೈಯ್ಯ ಹಿಡಿದು ಕಣ್ಣ ನೆನಸಿ,
ಅವರ ಸಲುವಾಗೆನ್ನ ಚೆನ್ನಿ, .ಮದುವೆಯಾಗು ಎಂದನು.

ನನ್ನ ಮನಸೋ ಒಲ್ಲನೆನುವುದು; ಚಾಮ ಬರುವ ನಚ್ಚುಹೋಗದು ;
ಎಲ್ಲಿ ಬರುವನು ? ಗಾಳಿ ಬಡಿದು ಹಡಗು ಪುಡಿಪುಡಿಯಾಯಿತು.
ಹಡಗು ಪುಡಿಪುಡಿಯಾಯಿತಯ್ಯೋ ಸಾಯದೇತಕೆ ಚಾಮ ಉಳಿದ !
ಕೊರಗಿ ನಾನೀ ಬೇಗೆಯಲ್ಲಿ ಏಕೆ ಬದುಕುತ್ತಿರುವೆನು !

ಅಪ್ಪ ಹೇಳಿದ, ಗದರಿಕೊಂಡ ; ಅವ್ವ ಬಾಯಲಿ ಆಡಬಲ್ಲಳು ;
ಅವಳು ನೋಡಿದ ನೋಟವೇ ನನ್ನೆದೆಯನಿರಿಯಿತು. ಮುರಿಯಿತು.
ಅವನ ಕೈಯಲಿ ಕೈಯ್ಯನಿಟ್ಟರು; ಮನಸು ಕಡಲಲಿ ನಿಂತುಹೋಯಿತು,
ಅಂತು ಮುದಿಯ ರಾಮಗೌಡ ನನಗೆ ಗಂಡನಾದನು.

ಮದುವೆಯಾಗಿ ನೆಟ್ಟಗೆಲ್ಲಾ ನಾಲ್ಕುವಾರ ಕಳೆಯಲಿಲ್ಲ.
ಬಾಗಿಲಲ್ಲಿ ಕಲ್ಲಮೇಲೆ ಕುಳಿತು ಕೊರಗುತ-ಕಂಡೆನು !
ಗಾಳಿಯಾಗಿ ಬಂದ ಚಾಮ ಎಂದುಕೊಂಡೆನು-ಚಾಮ ನಕ್ಕು.
ತೆರೆವ ತಂದೆ, ಮದುವೆಯಾಗಲು ಬಂದೆ, ಚೆನ್ನಿ ಎಂದನು.

ಬಿಕ್ಕಿಬಿಕ್ಕಿ ನುಡಿಸಿ ಸುಡಿಸಿ, ದುಃಖವೆಲ್ಲಾ ಹೇಳಿಕೊಂಡೆವು.
ಒಂದು ಮುತ್ತ ಸೆಳೆದುಕೊಂಡೆವು-ಅಟ್ಟಬಿಟ್ಟೆ, ಆಗಲೆ !
ಸಾಯ ಒಲ್ಲೆನೆ ನಾನು ಪಾಪಿ! ಅಯ್ಯೊ ! ಪಾಪಿಗೆ ಸಾವು ಬಹುದೆ ?
ಹುಟ್ಟದೇ ಇರಬಾರದೇ ! ಈ ಬೇಗೆಬಾಳನು ತಾಳೆನೇ !

ಗಾಳಿಯಾಗಿ ಸುಳಿಯುತಿರುವೆ-ಮನೆಯ ಕೆಲಸ ಅಕ್ಕರಿಲ್ಲ,
ಚಾಮನನು ನೆನೆಯುವುದು ಪಾಪ; ಎಷ್ಟೋ ತಡೆಯುವೆ ಮನಸನು.
ಒಳ್ಳೆ ಗರತಿಯಾಗಿ ಬದುಕಲು ಎದೆಯನೆಷ್ಟೋ ಗಟ್ಟಿಮಾಡುವೆ,
ರಾಮಗೌಡನ ಪ್ರೀತಿ ನಂಬಿಕೆಗೆಂತು ದ್ರೋಹವ ಬಗೆವೆನು !

LADY LINDSAY (1750-1825) : Auld Rabin Gray

ಪದುಮ

ಅರಸಿನ ಕುಲವೋ, ಏನಿದ್ದೇನು !
  ಸುರವಧು ರೂಪೋ, ಏನಿದ್ದೇನು !
ಗುಣವೋ, ಸೊಬಗೋ, ಏನಿದ್ದೇನು !
  ಪದುಮಾ, ಇದ್ದುವು ನಿನಗೆಲ್ಲಾ.
ಪದುಮಾ, ಎಚ್ಚತ್ತಳುವುದೆ ಅಲ್ಲದೆ
  ಕಣ್ಣಿವು ನಿನ್ನನು ಕಾಣುವುವೆ ?
ನೆನಸಿಕೊಳುವೆ, ಬಿಸುಸುಯ್ಯುವೆ, ಇರುಳನು
  ನಿನಗೆಯೆ ಮೀಸಲು ತೆಗೆದಿಡುವೆ.

LANDOR : Rose Aylme

ಕನ್ನಡದ ಬಾವುಟ

ಏರಿಸಿ, ಹಾರಿಸಿ, ಕನ್ನಡದ ಬಾವುಟ
ಓಹೊ ಕನ್ನಡನಾಡು, ಆಹ ಕನ್ನಡ ನುಡಿ.
ಹಾರಿಸಿ, ತೋರಿಸಿ ಕೆಚ್ಚೆದೆಯ ಬಾವುಟ,
ಗಾಳಿಯಲಿ ಪಟಪಟ, ದಾಳಿಯಲಿ ಚಟಚಟ,
ಉರಿಯಿತೋ ಉರಿಯಿತು ಹಗೆಯ ಹಟ ಮನೆ ಮಟ,
ಹಾಳ್ ಹಾಳ್ ಸುರಿಯಿತು ಹಗೆಯ ಬೀಡಕ್ಕಟ,
ಬಾಳ್ ಕನ್ನಡ ತಾಯ್
ಏಳ್ ಕನ್ನಡ ತಾಯ್ !
ಆಳ್ ಕನ್ನಡ ತಾಯ್ !
ಕನ್ನಡಿಗರೊಡತಿ ಓ ರಾಜೇಶ್ವರೀ !

ಕನ್ನಡದ ಬಾವುಟವ ಹಿಡಿಯದವರಾರು

ಮೌರ್ಯ ಕಳಚುರ್ಯರು, ಗಂಗರು, ಕದಂಬರು,
ರಟ್ಟರು, ಚಳುಕ್ಯರು, ಹೊಯ್ಸಳರು, ಯಾದವರು,
ಇಳೆಗೆ ಮೇಲಾದವರು, ಬಾಣರು, ಜಾಣರು,
ಕೊಲೆಯ ಕಾಳ್‌ಕಿಚ್ಚಿಂಗೆ ತಂಪುಮಳೆ ತಳಿದು,
ಚೆಲುವು ನೆಲ ಸಾಲುತ್ತು, ಕಲೆಯ ಹೊಂಬೆಳೆಯಿಟ್ಟು,
ನಗಿಸಿದರು ನಾಡನ್ನು, ಕಡಿದು ಕಗ್ಗಾಡನು,
ಮಾನವನ ದೇವತೆಗೆ ತಂದ ಜಿನಭಕ್ತರು,
ಹಂಪೆಯ ವಿರೂಪಾಕ್ಷ ಪುತ್ರರು, ವಿರಕ್ತರು,
ವೀರನಾರಾಯಣನ ಕೃಪೆಯೊಳಾಸಕ್ತರು,
ಶ್ರೀಗೌರಿ ಕಾವಲಿಹ ರಾಯರನುರಕ್ತರು.
ನಮ್ಮ ತಾಯ್ ಮಕ್ಕಳು–
ಬಾಳ ಬೆಳ್‌ದಿಂಗಳಲಿ ಒಲಿದು ನಲಿದವರು–
ಬೇವೊ ಬೆಲ್ಲವೊ ಬರಲಿ, ಮಲ್ಲಿಗೆಯೊ ಮುಳ್ಳೋ,
ಬಾನ ಬೆಳಕಿನಲಿ, ಮಾನದಳುಕಿನಲಿ,
ಚೆನ್ನು ಬದುಕನು ಕುಣಿಸಿ ಒಲಿದು ನಲಿದವರು–
ನಮ್ಮ ತಾಯಣುಗರು.
ಪಂಪನೋ, ರನ್ನನೋ, ಬಸವನೋ, ಮಾಧವನೊ,
ಆ ಅಕ್ಕಮಹದೇವಿ, ನಾರಣಪ, ಚಿಕದೇವ,
ಜಕ್ಕಣ, ಹೊನ್ನಮ್ಮ, ನಮ್ಮಮ್ಮನೆಳೆಯರು,
ಚೆಲುವ ಚೆಲುವೆಯರು – ಚಿನ್ನದ ಚೆಣ್ಣರು,
ಕಲಿಗಳು, ಕಿಡಿಗಳು, ಗಂಡರು, ಮೊಂಡರು,

ನಲಿದೊಲಿದು ಬೆಚ್ಚೊಂದು ನೆಚ್ಚಿಂಗೆ ಮೆಚ್ಚಿಂಗೆ
ಕಿಚ್ಚಿನಲಿ ಹಾಯ್ದು ನಲ್ಲನ ಹಿಡಿದ ಹೆಂಡಿರು.
ಸತಿಗಳು, ಯತಿಗಳು, ವ್ರತಿಗಳು, ಕೃತಿಗಳು –
ಕನ್ನಡದ ಬಾವುಟವ ಹಿಡಿಯದವರಾರು ?
ಕನ್ನಡದ ಬಾವುಟಕೆ ಮಡಿಯದವರಾರು ?
ನಮ್ಮ ಈ ಬಾವುಟಕೆ ಮಿಡಿಯದವರಾರು ?
ಹೇಳಿರೋ ಹೆಸರೊಂದು ನೆನಹಿನಲಿ ಸುಳಿದರೆ !
ಹುಡುಕಿರೋ ಹೇಡಿ ತಾನೊಬ್ಬ ಮನೆಗುಳಿದರೆ !

ಆಳ್ ಕನ್ನಡ ತಾಯ್

ಕನ್ನಡದ ನಾಡಲಾ
ಕನ್ನಡದ ನುಡಿಯಲಾ,
ಕನ್ನಡಿಗನೆದೆ ಕಡೆದ ತೆಗೆಯಲಾ ಕೆನೆಯಲಾ !
ಬೆಳಕು ಹರಿಯಿತು ಏಳಿ,
ಇರುಳು ಸವೆಯಿತು ಏಳಿ,
ತಾಯ ಕರೆ ಕೇಳಿ,
ಏಳಿರೋ, ಏಳಿರೋ, ಬಾಳ ಬಲಿ ಬೇಳಿರೋ
ಎಲ್ಲೊಲುಮೆಯೂ ಕೂಡಿದೊಂದೊಲುಮೆತಾಳಿರೋ,
"ತಾಯುಳಿಯೆ ನಾನುಳಿದೆ,
ತಾಯಳಿಯೆ ನಾನಳಿದೆ,
ಮನೆ ಕಾಯಿ, ತುರು ಕಾಯಿ, ನಾಡ ಗಡಿ ಗುಡಿ ಕಾಯಿ,
ಕಾಯಲಾರೆಯ, ಸಾಯಿ"
ಎಂದೆಲ್ಲ ಏಳಿರೋ–
ಆಹ ಕನ್ನಡನುಡಿ, ಆಹ ಕನ್ನಡ ನಾಡು,
ಹಿರಿಯ ಕನ್ನಡ ಪಡೆ, ಮರಿಯ ಕನ್ನಡ ಪಡೆ,
ಏಳಿರೋ, ಬಾಳಿರೋ,
ಕನ್ನಡದ ಬಾವುಟವ ಹಿಡಿಯಿರೋ, ನಡೆಯಿರೋ !
ಏಳ್ ಕನ್ನಡ ತಾಯ್,
ಬಾಳ್ ಕನ್ನಡ ತಾಯ್,
ಆಳ್ ಕನ್ನಡ ತಾಯ್,
ಕನ್ನಡಿಗರೊಡತಿ, ಓ ರಾಜೇಶ್ವರೀ !

ಏರಿಸಿ ಹಾರಿಸಿ ಕನ್ನಡದ ಬಾವುಟ

ಇಂದಿನದೆ ಹೇಳಿರೋ ಈ ನಮ್ಮ ಬಾವುಟ !
ಕುಂದಿಹುದೆ ನೋಡಿರೋ ಈ ನಮ್ಮ ಬಾವುಟ !

ಕಂದದಿದೆ ಇಂದಿಗೂ ಕನ್ನಡದ ಬಾವುಟ !
ಏನೇನ ಕಂಡುದೋ ಬಾನಾಡಿ ಬಾವುಟ !
ಆವುದನು ಕಾಣದೋ ಜೀವಕಳೆ ಬಾವುಟ !
ಕನ್ನಡದ ಬಾವುಟಗಳೊಂದಾದ ಬಾವುಟ !
ಏರಿಸಿ ಹಾರಿಸಿ ತೋರಿಸಿ ಬಾವುಟ !
ತೇಲಾಡು, ಮೇಲಾಡು ಓಲಾಡು ಬಾವುಟ !
ಚೆಲುವಾಗು, ಗೆಲುವಾಗು, ಬಲವಾಗು ಬಾವುಟ,
ಹೊನ್ನಾಗಿ, ಹೆಣ್ಣಾಗಿ, ಹಸನಾದ ಮಣ್ಣಾಗಿ,
ಹೊಸ ಹೊಸತು ಕಣ್ಣಾಗಿ, ಬೆಳಕಾಗಿ, ಬೆಳೆಯಾಗಿ,
ಕೂಡುತಿಹ ಕನ್ನಡದ ಹೊಮ್ಮುಗೆಯ ಕಾವಾಗಿ,
ಪರಿಪರಿಯ ಹೊಂಬಗೆಯ ಹೆರಿಗೆಯೇ ನೋವಾಗಿ,
ಸಿರಿಯ ಜಯಚಾಮನ ಹಿರಿಯೊಲುಮೆ ಹೂವಾಗಿ,
ಬಾಳು ಎಲೆ ಬಾವುಟ !
ಬಾಳ್ ಕನ್ನಡ ತಾಯ್,
ಏಳ್ ಕನ್ನಡ ತಾಯ್,
ಆಳ್ ಕನ್ನಡ ತಾಯ್,
ಕನ್ನಡಿಗರೊಡತಿ ಓ ರಾಜೇಶ್ವರಿ !

ಕನ್ನಡ ತಾಯ ನೋಟ

(ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷದ ಹಬ್ಬದಲ್ಲಿ)

೧

ಒಸಗೆ ನುಡಿ

ಹಿರಿಯರಿರ, ಕೆಳೆಯರಿರ, ಅಕ್ಕತಂಗಿಯರಿರಾ, ಅಣ್ಣತಮ್ಮಂದಿರಾ,
ಒಸಗೆನುಡಿ ತಂದಿಹೆನು ನಾನೊಂದ, ತಾಯಿಂದ, ಸಿರಿಯ ತಾಯಿಂದ–
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು, ತಾಳಿ ಬಾಳುವಿರಾ ?
ಕಣ್ಣಾರ ಕಂಡೆನವಳನು–ಕಂಡು, ತಂದಿಹೆನು, ಕೇಳಿ,
ಅವಳೆನ್ನೊಳಾಡಿದುದನಾಡುವೆನು ನಿಮ್ಮಲ್ಲಿ, ಕೇಳಿ.

೨

ಕನ್ನಡ ನಾಡಸಿರಿ

ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ,
ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರಯಾತ್ರೆಯಲಿ,
ಏನು ಚೆಲುವಿನ ನಾಡು ! ಚೆಲುವು ಚೆಲ್ಲುವ ನಾಡು ಕನ್ನಡದ ನಾಡು !
ಏನು ಚಿನ್ನದ ನಾಡು ನಮ್ಮೊಲುಮೆಯಾ ನಾಡು ನಮ್ಮಿನಿಯ ನಾಡು!

ಕಾವೇರಿಯಿಂದಮಾ ಗೋದಾವರಿಯ ವರೆಗೆ ಚಾಚಿರುವ ನಾಡು !
ಬಳಸಿದೆನು, ಸುತ್ತಿದೆನು, ಕಣ್ಣಣಿಯ ನೋಡಿದೆನು, ಕುಣಿದು ಹಾಡಿದೆನು:
ಕೆಳಗೆ ಬೆಳೆಹೊಲ ಕಪ್ಪು, ಮೇಲೆ ಬಾಂಯೊಲ ಕಪ್ಪು, ಬೆಟ್ಟಗಳು ಕಪ್ಪು,
ಕಾರ್ಮೋಡಗಳು ಕಪ್ಪು, ಹೊಳೆ ಕೆರೆಯ ಮಡು ಕಪ್ಪು, ತಾಯಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನ ಕಪ್ಪು – ಏನೆಂದೆ? ತಪ್ಪು ತಪ್ಪು ! –
ಮೂಡ ಪಡುವಲು ತಿರುಗು, ಬಡಗ ತೆಂಕಲು ತಿರುಗು, ಕರ್ನಾಟದಲ್ಲಿ;
ನಿಮ್ಮೂರ ಹೆಣ್ಣುಗಳ ಕಣ್ನೋಟ, ತಣ್ನೋಟ ಕರ್ಪು, ಬಲು ಕರ್ಪು!
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ಣೋಟ–ಕೂರ್ಪು, ಅರ್ಪು !

ಕನ್ನಡ ತಾಯಿ ನಮ್ಮಮ್ಮ

ಓ ತಾಯೆ, ಕನ್ನಡದ ಪೆರ್ತಾಯೆ, ನಮ್ಮಮ್ಮ, ದೇವಿ, ಸಮ್ರಾಜ್ಞೆ
ಸುಳಿಗುರುಳು, ನಗೆಗಣ್ಣು ಏನು ಕಪ್ಪೇ ನಿನಗೆ – ಮುತ್ತಿಡುವ ಕಪ್ಪು!
ನಿನ್ನ ಕಲಿಗಳ ಕೂರ್ಪು, ಕೆಚ್ಚೆದೆಯ ಕಟ್ಟಾಳ ಕೂರ್ಪು, ನೆಚ್ಚಾರ್ಪು,
ಆರು ತಡೆಯಲುಬಹುದು–ಪುಲಿಕೇಶಿ ಹರ್ಷರೇ ಹೊಯ್ದು ಸಾರುವರು.
ಕರ್ಪಿರಲಿ, ಕೂರ್ಪಿರಲಿ, ನಿನ್ನ ಬೆಳ್ಪನು ಹೇಳು – ಕೂರಸಿಯ ಮಿಂಚು,
ಕಾರ್ಮಿಂಚು, ಪೆಣ್ಮಣಿಗಳಾ ಕಣ್ಣ ನುಣ್ಮಿಂಚು, ಅರಿದರಾ
ಕೂರ್ನೋಟ ಮಿಂಚು !
ಮೆಲ್ಲಮೆಲ್ಲನೆ ತೇಲಿ, ಆಳದಲಿ ಮಲೆಯೆಡೆಯೊಳಲುಗದೆಯ ಅಲುಗಿ,
ಕಡಿದು ಬಂಡೆಗೆ ಬಂದು, ನೆಗೆದು ಬೆಳ್ಳಂಗೆಡೆವ ನೀರ್ ಬೀಳ ಬೆಳ್ಪು!
ಕಡೆದ ನೊರೆ, ಚಿಗಿವ ನೊರೆ, ತೂರುನೊರೆ, ಕುದಿವ ನೊರೆ, ಬೆಳ್ಪಿನೊಳ್ ಬೆಳ್ಪು !
ಆ ಬೆಳ್ಪು, ಆ ತೆಳ್ಪು, ಆ ಮೆಲ್ಪು – ನಿನ್ನ ಮಕ್ಕಳ ಬಾಳಿನೊಳ್ಪು;
ನೀರ್ಬೀಳ ಬೆಳ್ನೊರೆಯ ಬಿಸಿದ ಬೆಳ್ದಿಂಗಳಾ ಮಳೆಬಿಲ್ಲ ತಳ್ಪು !
ಬೆಳ್ಗೊಳವೊ, ತೀರ್ಥಗಳೋ, ಧರ್ಮಧರ್ಮದ ತಿರುಳೊ, ಪಾಡುವರ ಪುರುಳೋ,
ಒಳ್ಗನ್ನಡದ ಕರೆಯೊ, ಕುಸುರಿಗೆಲಸದ ಸಿಲೆಯೊ; ಆ ನಯವೊ, ಮೆರುಗೋ !
ನಿನ್ನ ಚಿಣ್ಣರ ಸೊಬಗೊ, ಬೆಡಗೊ, ಮೆಲ್ಲೆದೆತಣ್ಪೊ, ಕೊಡುಗೈಯ ಬಿಣ್ಪೋ !
ಓ ಎನ್ನ ತಾಯಿ, ಕನ್ನಡ ತಾಯಿ, ನಮ್ಮವ್ವ, ದೇವಿ, ಸಮ್ರಾಜ್ಞೆ
ನಿನ್ನನರಸುತ ಸುಳಿವ, ನೋಂಪಿಯೆನೆ ನಿನ್ನೊಲುಮೆನಾಡನೊಳಕೊಳುವ,
ನಿನ್ನ ಚೆಲುವನು ಸವಿವ ಮಗುವಾರು ತಣಿಯದನು, ಹಾಡಿ ಕುಣಿಯದವನು,
ಭಕ್ತಿಯಲಿ ತಲೆದೂಗಿ ಬಾಗಿ ಮಣಿಯದನು !

೩

ಚೆಲುವಿನ ನಾಡು

ಚೆಲುವು ಕಣೆ ಕಾರ್ವಾರವೆದೆ ತುಂಬಿ, ಗೋಕರ್ಣದಲಿ ಮಿಂದು, ಸಂದು,
ಉಡುಪಿಯಲಿ ಕೃಷ್ಣಂಗೆ ಕೈಮುಗಿದು, ಮಂಗಳೂರಿನ ಹಿರಿಯ ಸಂಟರಲಿ ಸಂದು,
ಚಾರ್ಮಾಡಿ ಘಾಟಯನು ಬಳಬಳಸಿ ಮೇಲೇರಿ ಬಂದವನು ಕಂಡೆ, ಕಂಡೆ!

ಮೇಲೆ ತಿಳಿಯಾಕಾಶ, ಸುತ್ತಲೂ ಬೆಟ್ಟಸಾಲ್ ತೋಳ ತೆಕ್ಕೆಯಲಿ
ಕಣಿವೆಯೇರುವ ಕಾಡು, ದಟ್ಟಡವಿ, ಒಮ್ಮೊಮ್ಮೆ ಹಕ್ಕಿಗಳ ಹಾಡು,
ಮರದ ಮರೆಯಲಿ ದುಮುಕುವಬ್ಬಿಗಳ ಹಬ್ಬಿ ಹರಡಿದ ಕೂಗುಕೊರಲು !
ಕಂಡೆನಾಕೆಯನಲ್ಲಿ, ದೂರದಲಿ, ಕಣ್‌ಪುಣ್ಯ ಮಿಂಚಿ ಮರೆಯಾಯ್ತು!
ಕನ್ನಡದ ಆ ನೋಟ, ದೇವಿಯಾ ದರ್ಶನಂ ಪೊಳೆದು ಬಯಲಾಯ್ತು !
ಏವೆಹೊತ್ತಿನಾ ನೋಟ, ಸವಿನೋಟ, ಸವೆಯದೆದೆಚಿಮ್ಮುತಿಹುದಿನ್ನೂ !
ಅಮೃತಲೋಕದ ಮಾತೆ, ಅಳಿಯದಳ್, ಬಾನ್‌ಬಾಳ ಪೆರ್ಮೆಗಳ ತಾಯಿ,
ತಲೆಯಲ್ಲಿ ಪೊನ್ನಮುಡಿ, ಪದಿದರಿಲ ಪೆಂಪು, ಬೆಳ್ದಾವರೆಯ ಪೊಂಗಯ್!
ಸುತ್ತಲುಂ ಪೊನ್ನಾಡ ಕನ್ನಡದ ಪೆರ್ಮನಡಿಗಳ್, ಸಾವನೊದೆದು ಬೆಳಗಿ,
ಕನ್ನಡದ ಮಕ್ಕಳ್ಗೆ ಕನ್ನಡದ ಪಾಲೆರೆದು, ಬಾಳ್ಗೆ ಬಾಳ್ ಪೊಯ್ದು,
ಬಾಳ್ವವರು ಮೆರೆವವರು ! ಪೆರ್‌ನೋಟ ! ಪಿರಿಯ ತಾಯ್, ಪಿರಿಯ ಮಕ್ಕಳ್ !
ಕಪ್ಪು ಹೆಪ್ಪಿನ ಕುರುಳ ಕರ್ಮುಗಿಲ ಬಸಿರಿಂದ ತೊಟ್ಟನೊಡೆಹೊಮ್ಮಿ,
ಬಾನ ಈ ಕರೆಯಿಂದ ಆ ಕರೆಗೆ ಚಿಮ್ಮಿ ಒಡನಡಗುವುದೆ ತೇಜಂ.
ಆ ತೇಜದುರಿಯಂತೆ ಕಣ್ಣುಳ್ಕಿ, ಹೊರಗಡಗಿ, ಒಳಗಿರ್ಪುದಿನ್ನುಂ.
ಒಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ.

ಯಾರವ್ವ ನೀ ತಾಯಿ!

ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ
ಬೇಗುದಿಯ ಬಿರುಕಿನಲಿ ಮುಳ್ಳೆಡೆಯ ಕಲ್ಲುಹೂವಿಡಿದರೆಯ ಮೇಲೆ,
ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಲಿನಾಳದಲಿ ! –
"ಯಾರವ್ವ, ನೀ ತಾಯಿ? ಏತಕಿಂತೊಬ್ಬಳೇ ಕುಳಿತೆ ಕಾಡಿನಲಿ ?
ಏಕೆ ಮೊಗ ಬಾಡಿಹುದು, ಕಂದಿಹುದು, ನೊಂದಿಹುದು, ಕಾಂತಿಗುಂದಿಹುದು?"
ಕಂಬನಿಗಳೂರುತಿಹ, ಕಳವಳದ, ಕೂರ್ಮೆ ನಡುಗಿಪ ನುಡಿಯ ಕೇಳಿ,
ಕತ್ತೆತ್ತಿ, ಪಳಮೆಯಾಳದ ಕಣ್ಣನೆನ್ನ ಕಣ್ಣಲಿ ನೆಟ್ಟು, ಕಯ್ಯ
ಕುಳ್ಳಿರಲು ಸನ್ನೆಗೈದೀಪರಿಯೊಳಾಡಿದಳು, ತೋಡಿದಳು ತೊಳಲ-
ಕಣ್ಣಾರ ಕಂಡುದನು, ತಾಯೆನ್ನೊಳಾಡಿಸುದನಾಡುವೆನು, ಕೇಳಿ.

ಕಿವಿಗೊಟ್ಟು ಕೇಳಿ:
ಎದೆಗೊಟ್ಟು ಕೇಳಿ:
ಏಳಿ, ಎಚ್ಚರವಾಗಿ, ಅರಳಿ ಬಾಳಿ !

೪

ಕನ್ನಡ ತಾಯ ಅಳಲು

"ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ–ಹಿರಿದಾಗಿ ಬಾಳಿದವಳೊಮ್ಮೆ :
ಈಗ ಬಡತನ, ಬಡವೆ, ಬಡವಾದೆ : ಬಡವಾದ ಮಕ್ಕಳನ್ನು ನೋಡಿ,
ಬತ್ತಿ, ಮತ್ತಿಮ್ಮಡಿಯ ಸೊರಗಿನಲಿ ಬಡವಾದೆ–ಸಾಪಿಲ್ಲ ನನಗೆ !
ಸಾಪಿಲ್ಲ – ಸಾಯುತಿಹೆ : ಹೊಸ ಮಳೆಗಳಾಗಿ, ನೆಲ ಹೊಸ ಹೊನಲು ಹರಿದು,
ಹೊಸ ಹಮ್ಮು ಹಮ್ಮುತ್ತ, ಎಲ್ಲರೂ ನನ್ನಕ್ಕತಂಗಿಯರು – ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚಿನ್ನವಾದರು–ನೋಡು, ನೋಡು–
ಆ ಕಡೆಗೆ ಈ ಕಡೆಗೆ ತೂಗುವರು ತೊನೆಯುವರು, ಆ ಡೊಂಕ, ಜಿಂಕ!
ಪೇರೊಕ್ಕಲಾಗಿ ಪಾಡುವರು;
ಅವರ ಮಕ್ಕಳು ಬೆಳೆದು ಕಳೆಗೂಡಿ ಮನೆಬೆಳಗಿ ಹಬ್ಬ ಮಾಡುವರು –
    ತಾವ್ ಮೊದಲು ಬದುಕಿ,
    ತಾಯ್ ಮೊದಲು ಬದುಕಿ
ಹೆರರ ಹೊರೆಗಳನಿಳಿಸೆ, ಹೆರರ ಸೆರೆಗಳ ಬಿಡಿಸೆ ಕಯ್ಯ ನೀಡುವರು.
ಆ ಸಯ್ಪು, ಆ ಪುಣ್ಯ, ನನಗಿಲ್ಲ : ನನ್ನ ಮಕ್ಕಳಿಗಿಲ್ಲ ಹಬ್ಬ –
    ನನ್ನ ಮಕ್ಕಳಿಗಿಲ್ಲ ಹಬ್ಬ :
ಮಳೆ, ಸುಗ್ಗಿ; ಬೆಳೆ, ಬೆಳಕು; ಹಾಡು, ಹಸೆ; ಕೂಗಾಟ, ಕುಣಿದಾಟ, ಪಾಟ;
    ಒಲೆದಾಟ, ನಲಿದಾಟ, ಒಲುಮೆ ಬೀರಾಟ
ನನ್ನ ಮಕ್ಕಳಿಗಿಲ್ಲ – ನನಗಿಲ್ಲ – ಬಾಳ್ಗೆ ಆ ಅಕ್ಕತಂಗಿಯರು !
    ನಮಗಿಲ್ಲ ಬಾಳು.
    ಎಲ್ಲರೂ ಬಾಳುವೆಡೆ ನಮಗೆ ಸಾವೆ ?
    ಎಲ್ಲರೂ ನಲಿವ ಕಡೆ ನಮಗೆ ನೋವೆ ?
ಏನು ಕವಿಯಿತೊ ಮಂಕು, ಮಕ್ಕಳಿಗೆ ! ಯಾರೆರಚಿದರರೊ ಬೂದಿ, ಕಾಣೆ,
ನನ್ನನೊಲ್ಲರು ನನ್ನ ಮಕ್ಕಳೇ ! ತಾವ್ ಬಾಳಿ, ತಾಯ ಬಾಳಿಸರು.
ಹೆರರ ನುಡಿ ಹೆರರ ನಡೆ–ಹೆರರ ಕೂಗೇ ಕೂಗು; ಹೆರರದೇ ಹೆಮ್ಮೆ
    ನನ್ನ ಮನೆ ಹಾಳು !
    ನನ್ನ ನುಡಿ ಬೀಳು !
ನನ್ನ ನಾಡಿನಲಿರುಳು : ನನ್ನ ತೋಟವನಗೆವ, ತೆಂಗಡಿಕೆಯಿಡುವ,
ತಾವರೆಯ ಕಾಪಿಡುವ, ಮೊಲ್ಲೆ ಮಲ್ಲಿಗೆ ನೆಡುವ, ಆನಂದ ಕೊಡುವ
ಮಕ್ಕಳೆಲ್ಲಿಹರೆನಗೆ – ಹೆರರೊತ್ತೆ ಗಡಿಬಿಡುತ ಹದುಗುತ್ತ, ನುಗ್ಗೆ ಕುಗ್ಗುತ್ತ,
ಹೆರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳ ನೂಕುವೆನು.–"

ಬಾರಮ್ಮ ಹರಸು

ಅರಿದೆನರಿದೆನು ಮಾತನಾಡುವಳದಾರೆಂದು : ಕನ್ನಡದ ತಾಯಿ !
ನಮ್ಮ ಕನ್ನಡ ತಾಯಿ, ತನ್ನ ಹೊಂಬಸಿರಿಂದ ನಮ್ಮನ್ನು ತಂದು,
ನಾವು ಬಿಟ್ಟೊಡೆ ಬಿಡದೆ, ಹಂಬಲಿಸಿ, ಮರುಹುಟ್ಟ ಹಾರೈಸುತಿಹಳು-
ನಾನೆಂದೆ, ಅಳಲನಾರಿಸಬಯಸಿ-"ಏಕಮ್ಮ, ಇನಿಸೊಂದು ಕೊರಗು?
ಬೇಡಮ್ಮ ಮಕ್ಕಳಲಿ ಇನಿಸೊಂದು ಕಡುಮುನಿಸು-ಬಾರಮ್ಮ, ಹರಸು.
ನಿನ್ನ ನಾಡಿನೊಳದೆಕೊ ಬೆಳಕು ಮೂಡಿಹುದು-ಜೀವನ ಕೂಡಿಹುದು.
ನಿನ್ನ ಮಕ್ಕಳು ನಿದ್ದೆಗಳೆದೆದ್ದ ಸಿಂಹದಂತೇಳುತ್ತ, ಮೊಳಗಿ,
ಕಣಕಿಳಿದು ಪಂಪ ನೃಪತುಂಗರಾ ಮಾತುಗಳು ದಿಟವೆನಿಸುತಿಹರು.
ಸೆರೆಯನೊಕ್ಕಡೆಗೊಗೆದು, ಬಿಡುಗಡೆಯ ಕೈಕೊಂಡು, ಹಳ ನೆನಪು ನೆನೆದು,
ಹೊಸ ಕಾಣ್ಕೆಗಳ ಕಂಡು, ಸಾಮ್ರಾಜ್ಯಗಳ ಮತ್ತೆ ಕಟ್ಟುತಿಹರು.
ನಿನ್ನ ನಾಡೊಂದಾಗಿ, ನಿನ್ನ ನುಡಿ ಮೇಲಾಗಿ, ಮನೆ ಮಕ್ಕಳೆಲ್ಲ
ಪೇರೊಕ್ಕಲಾಗಿ ಪಾಡುವರು !
ತಾಯ್ ಬದುಕಿ, ತಾವ್ ಬದುಕಿ, ಹೆರರ ಬದುಕಿಪರು !
ಹಾಳು ಹಂಪೆಯ ನಡುವೆ, ನಡುಕಟ್ಟಿ ಮತ್ತೊಮ್ಮೆ ಮುಡಿಪಾಗಿ ತಾಯ್ಗೆ
ಭಕ್ತಿಯಲಿ ಜೀವವನು ಸಲಿಸುವರು-ಏಳು!
ಸಡಗರದ ಆ ಕೂಗು ಕೇಳು :

ನಾಡು ಸಿಂಗರವಾಯ್ತು

ನಾಡು ಸಿಂಗರವಾಯ್ತು, ಬೀಡು ಹೆಬ್ಬೆಳಕಾಯ್ತು, ಅದೊ ಹಬ್ಬ ಮೆರೆತ!
ಹೆಣ್ಣ ಚೆಲುವನು, ನೋಡು-ಗಂಡುಗಲಿಗಳ ನೋಡು-ಕಟ್ಟಾಳುಗಳನು.
ರಾಜರನು, ಋಷಿಗಳನು, ಕವಿಗಳನು, ಧೀರರನು, ಕರ್ಮವೀರರನು-
ಹೊಸತ ಹಳದನು ಮಾಡಿ, ಹಳದ ಹೊಸತನು ಮಾಡಿ, ನಾಡೊಂದು ಮೂಡಿ,
ಧರ್ಮ ಸತ್ಯಗಳಿಂದ , ಪ್ರೇಮ ಶಾಂತಿಗಳಿಂದ, ಸ್ವಾತಂತ್ರ್ಯದಿಂದ,
ಸುಖದಿಂದ, ಸೌಂದರ್ಯದಾನಂದದಿಂದೆಲ್ಲ ಸಮದೃಷ್ಟಿಯಿಂದ
ಬಾಳರೇ ನೀ ಬಂದು ನಲಿಸಿದೊಡೆ, ಹರಸಿದೊಡೆ-ಬಾ ತಾಯಿ, ಹರಸು.
ತೇರೇರು ಬಾ ತಾಯಿ, ನಿನ್ನ ಸಿಂಹಾಸನವನೇರು ಮತ್ತೊಮ್ಮೆ,
ಪಳಮೆಯಲಿ ಪೇರಾಲವನು ನೀನು ಬಿತ್ತಲದು ಮೊಳೆತು, ಮರವಾಗಿ,
ಪಡುವ ಮೂಡಲು ತೆಂಕ ಬಡಗಲೆಡೆ ಕೊಂಬೆಗಳನೆಸೆದೆಸೆದು ಬೀಗಿ,
ಈ ಕೊಂಬೆ ಕರಗಿದೊಡೆ ಆ ಕೊಂಬೆ ಬಿಳಲಿಳಿದು ಬೇರೂರಿ ತಾಗಿ
ಒಂದೆ ಮರವಮರವಾಗಿರ್ಪಂತೆ, ಅಮರವಾಗಿನ್ನುಮದೆ ಇಹುದು
ನಿನ್ನೊಂದು ಕರ್ನಾಟಕರತ್ನಸಿಂಹಾಸನಂ-ಬಾಳ್ಗೆ, ಅದು ಬೆಳೆಗೆ
ಕನ್ನಡದ ಮುಡಿಯಾಗಿ, ಕನ್ನಡದ ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ !
- ಬಾರಮ್ಮ, ಹರಸು".

೬

ನಕ್ಕಳಾ ತಾಯಿ

ನಕ್ಕಳಾ ತಾಯಿ.
ಮುದುಕಿ ಎಳೆಯವಳಾಗಿ, ಮಾಸು ಮಿಂಚೆಳೆಯಾಗಿ, ಸವೆದ ಮೈ ತುಂಬಿ,
ಕಡಲ ತೆರೆಗಳನುಟ್ಟು, ಬೆಟ್ಟಬಯಲನು ತೊಟ್ಟು, ಅರಿವ ಮುಡಿಗಿಟ್ಟು,
ಮುಗುಳ್‌ನಗೆಯ ನಸುನಕ್ಕಳಾ ತಾಯಿ, ನನ್ನ ತಲೆಯಲಿ
ಕಯ್ಯ ತಾವರೆಯನಿಟ್ಟು;
ಸುತ್ತಲುಂ ಕಾಣಿಸಿದರೊಡನೆ –
ಕನ್ನಡದ ಪೊನ್ನಾಡ ಪೆರ್ಮನಡಿಗಳ್ !
ಸಾವನೊದೆವಾ ಪಾಲ ಸೂಸುಕಿಡಿಗಳ್ !
ಹಿಂದೆ ನೀಡಿದ ಸಾಲು, ಮುಂದೆ ನೀಡಿದ ಸಾಲು, ಕನ್ನಡದ ಕರುಳುಗಳು –
ನಡುವೆ, ಸಿರಿತಾಯ್,

ಸಿರಿಗನ್ನಡಂ ಗೆಲ್ಗೆ ಕನ್ನಡತಾಯ್‌ಬಾಳ್ಗೆ

ಭುವನೇಶ್ವರೀ ದೇವಿ ರಥವನೇರಿದಳು.
ಕೂಗಿದರು ಎಲ್ಲರೂ ಒಕ್ಕೊರಲ್ !
"ತಾಯ್ ಬಿಜಯಮಾಡುವಳು, ದಾರಿ ಬಿಡಿ, ದಾರಿ ಬಿಡಿ, ಅಡ್ಡ ಬಾರದಿರಿ,
ಭಾರತಾಂಬೆಯ ಹಿರಿಯ ಹೆಣ್‌ಮಗಳೆ, ದಾರಿ ತೋರುವ ಹಿರಿಯ ಸೊಡರೆ,
ಬಾಳಮ್ಮ, ಬಾಳು !
ನೀನ್ ಬಾಳೆ, ಏನ್ ಬಾಳು ನಿನ್ನ ಮಕ್ಕಳದು ! – ಬಾನ್‌ಬಾಳು, ತಾಯೆ –
ಬಾಳಮ್ಮ, ಬಾಳು!"
ಚೆಲುವೆಯರ, ಚೆನ್ನಿಗರ, ಹಿರಿಯ ತಾಯ್ ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದಿರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮುನ್ನಡೆಗೆ ನಡಸುತ್ತ, ಮುಂದೆ ಸಾಗುವಿರಾ ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ ?
ಬನ್ನಿ, ಓ ಮಕ್ಕಳಿರ,
ಒಕ್ಕೊರಲೆಲ್ಲರೂ ಕೂಗಿ ಈ ಒಕ್ಕೂಗ – ಈ ಹಿರಿಯ ಕೂಗ –
"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ ಬಾಳ್ಗೆ –
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ !"

ಈ ಕವಿತೆಗಳ ಉಪಶೀರ್ಷಿಕೆಗಳು ಸಂಗ್ರಾಹಕನದು. ಕವಿತೆಯ ಮಹತ್ತ್ವವನ್ನು ಬಿಂಬಿಸಲು ಈ ಶೀರ್ಷಿಕೆಗಳನ್ನು ಸೂಚಿಸಿದೆ. ಈ ಒಂದೊಂದು ಶೀರ್ಷಿಕೆಯ ಭಾಗಗಳನ್ನೇ ಪ್ರತ್ಯೇಕವಾಗಿಯೂ ಹಾಡಬಹುದು.

ಬಿ.ಎಂ.ಶ್ರೀಕಂಠಯ್ಯ ಅವರ ಮಾತು ಮಂತ್ರ ಬರವಣಿಗೆ ಪ್ರತಿಭಾ ಸೂತ್ರ. ಅನುವಾದವಾಗಲಿ, ಸ್ವರಚನೆಯಾಗಲಿ ಆಯ್ಕೆಯಲ್ಲಿ, ಅಭಿರುಚಿಯಲ್ಲಿ ಸಮಚಿತ್ತದ ಹದ; ಸದಾಶಯದ ಮುದ. ಅಪ್ಯಾಯ ಮಾನಕ್ಕೆ ಆದ್ಯತೆ; ಆರ್ದ್ರತೆಗೆ ಮನ್ನಣೆ. ಬಿ.ಎಂ.ಶ್ರೀ. ಅವರು ಎರಡು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಒಂದು : ಇಂಗ್ಲೀಷ್ ಗೀತಗಳು. ಇನ್ನೊಂದು : ಹೊಂಗನಸುಗಳು. ಅವುಗಳ ಹೆಚ್ಚುಗಾರಿಕೆಯನ್ನು ಕನ್ನಡ ಕಾವ್ಯರಸಿಕರು ಕೊಂಡಾಡಿದ್ದಾರೆ. 'ಇಂಗ್ಲಿಷ್ ಗೀತಗಳು' ಕನ್ನಡ ನವೋದಯ ಕಾವ್ಯದ ಮೇರುಕೃತಿ. ಆಧುನಿಕ ಕನ್ನಡ ಕಾವ್ಯಪರಂಪರೆಗೆ ಹೊಸಬೆಳೆ, ಹೊಸಕಳೆ, ಹೊಸಸೆಲೆ, ಹೊಸನೆಲೆ ತಂದುಕೊಟ್ಟ ಕೃತಿ. ಅದರ ಅಯಸ್ಕಾಂತ ಸುಳಿಗೆ ಸಿಲುಕದವರಿಲ್ಲ. 'ಹೊಂಗನಸುಗಳು' ಕವನ ಸಂಗ್ರಹದಲ್ಲಿ 'ಶ್ರೀ' ಅವರ ವೈವಿಧ್ಯಮಯ ಕಾವ್ಯ ಪ್ರಯೋಗಕ್ಕೆ ನಾಡುನುಡಿ ಭಕ್ತಿಯ ಅಭಿವ್ಯಕ್ತಿಗೆ, ರಾಜಭಕ್ತಿ, ದೇಶಭಕ್ತಿ, ಸಾರ್ವಭೌಮತ್ವದ ಗೌರವಕ್ಕೆ ಸಾಕ್ಷಿಯಾಗುವ ಕವಿತೆಗಳಿವೆ. ಈ ಎರಡೂ ಗ್ರಂಥಗಳಿಂದ ಆರಿಸಿದ ಕವಿತೆಗಳ ಕಿರು ಸಂಕಲನ 'ಆಯ್ದ ಕವನಗಳು'.

ಪ್ರೊ. ಡಿ. ಲಿಂಗಯ್ಯ
ಅಧ್ಯಕ್ಷರು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ ಕಲಾಭವನ
೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು – ೫೬೦ ೦೧೯